**ಶುಭಾಶಯಗಳು**

'ಜನತಾವಾಣಿ'ಯ ಓದುಗರಿಗೆ, ಏಜೆಂಟರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ ದೀಪಾವಳಿ ಹಬ್ಬದ ಶುಭಾಶಯಗಳು.

- ಸಂಪಾದಕರು

ಸಂಪಾದಕರು : ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

**ಬಿಡುವು**

ಬಲಿಪಾಡ್ಯಮಿ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ಬಿಡುವು. ಕಾರಣ, ನಾಳೆ ಭಾನುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

- ವ್ಯವಸ್ಥಾಪಕರು

ದಾವಣಗೆರೆ

ಶನಿವಾರ, ನವೆಂಬರ್ 02, 2024

ಸಂಪುಟ : 51 ಸಂಚಿಕೆ : 170 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

TANISHQ Nav-raani

ಚಿನ್ನಾಭರಣಗಳ ತಯಾರಿಕಾ ವೆಚ್ಚದ ಮೇಲೆ ಮತ್ತು ವಜ್ರಾಭರಣಗಳ ಮೌಲ್ಯದ ಮೇಲೆ 20% ವರೆಗೆ ಕಡಿತ

ಯಾವುದೇ ಜ್ಯುವೆಲ್ಲರ್‌ನಿಂದ ಖರೀದಿಸಿದ ಹಳೆಯ ಚಿನ್ನದ ಮೇಲೆ 100% ವಿನಿಮಯ ಮೌಲ್ಯ ಪಡೆಯಿರಿ.

ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ. ಮೊ:63647-95111





# ಐದು ದಶಕಗಳ ಸಾಧನೆಯಲ್ಲಿ ರಾಜ್ಯಕ್ಕೆ ಅಂತರರಾಷ್ಟ್ರೀಯ ಮನ್ನಣೆ : ಎಸ್ಸೆಸ್ಸೆಂ



ದಾವಣಗೆರೆ, ನ. 1 -ಕಳೆದ ಐದು ದಶಕಗಳಲ್ಲಿ ರಾಜ್ಯವು ಆಡಳಿತ, ಸಂಸ್ಕೃತಿ, ಸಾಹಿತ್ಯ, ಶಿಕ್ಷಣ, ವಿಜ್ಞಾನ, ಲಲಿತಕಲೆ, ಜಾನಪದ, ಕೃಷಿ, ನೀರಾವರಿ, ಪ್ರವಾಸೋದ್ಯಮ, ತಂತ್ರಜ್ಞಾನ, ಕೈಗಾರಿಕೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡುವ ಮೂಲಕ ಅಂತರ ರಾಷ್ಟ್ರೀಯ ಮನ್ನಣೆ ಪಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಅವರು ಜಿಲ್ಲಾಡಳಿತದಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾದ 69 ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ರಾಜ್ಯೋತ್ಸವ ಸಂದೇಶ ನೀಡಿದರು.

ಈ ಸಾಧನೆ ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಿದೆ. ನಾಡು ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವುದು ಯುವ ಜನರಿಗೆ ಪ್ರೇರಣಾದಾಯಕವಾಗಿದೆ. ಅವರೂ ಸಹ ಕನ್ನಡ ನಾಡಿನ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡು ರಚನಾತ್ಮಕ ಸಾಧನೆಗಳನ್ನು ಮಾಡುವಂತಾಗಲಿ ಎಂದು ತಮ್ಮ ಆಶಯ ವ್ಯಕ್ತಪಡಿಸಿದರು.

1956 ರಲ್ಲಿ ಏಕೀಕರಣಗೊಂಡ ಮೈಸೂರು ರಾಜ್ಯವನ್ನು 1973 ರ ನವೆಂಬರ್ (3ನೇ ಪುಟಕ್ಕೆ)

## 1.87 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ, ನ. 1 - ಕಳೆದ ಅಕ್ಟೋಬರ್ ತಿಂಗಳಲ್ಲಿ 1.87 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹವಾಗಿದೆ. ತೆರಿಗೆ ಸಂಗ್ರಹದಲ್ಲಿ ಶೇ.9ರಷ್ಟು ಹೆಚ್ಚಳವಾಗಿದೆ.

ಸಿ.ಜಿ.ಎಸ್.ಟಿ. ಸಂಗ್ರಹ 33,821 ಕೋಟಿ ರೂ., ಎಸ್.ಜಿ.ಎಸ್.ಟಿ. 41,864 ಕೋಟಿ ರೂ., ಐ.ಜಿ.ಎಸ್.ಟಿ. 99,111 ಕೋಟಿ ರೂ. ಹಾಗೂ ಸೆಸ್ ಸಂಗ್ರಹ 12,550 ಕೋಟಿ ರೂ. ಆಗಿದೆ. ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, (3ನೇ ಪುಟಕ್ಕೆ)


ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು

ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್ A/c

ಓಷನ್ ಪಾರ್ಕ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್ ಆವರಣ,
ಡಿ.ಸಿ. ಕಚೇರಿ ಹತ್ತಿರ, ಜಿ.ಎಂ.ಐ.ಟಿ. ಕಾಲೇಜು ಮುಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.



ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್

ಸುಸಜ್ಜಿತ ಮತ್ತು ಅತ್ಯಾಧುನಿಕವಾಗಿದ್ದು, ಇಲ್ಲಿ ಆರತಕ್ಷತೆ, ನಾಮಕರಣ, ಜನ್ಮದಿನ ಸಮಾರಂಭ, ಸಂಭ್ರಮಾಚರಣೆ, ಸಭೆ - ಸಮಾರಂಭಗಳಿಗೆ ಅನುಕೂಲವಾಗಿರುವ AC ಹಾಲ್ ಬಾಡಿಗೆಗೆ ಸಿಗುತ್ತದೆ. ಪ್ರತ್ಯೇಕ ಅಡುಗೆ ಕೋಣೆ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :

94485 89727, 70196 74592



ನಾಡಿನ ಸಮಸ್ತ ಜನತೆಗೆ

ದೀಪಾವಳಿ ಹಬ್ಬದ ಶುಭಾಶಯಗಳು

18 Years old, 100% Technology - Equipped GREEN Campus

RAINBOW RESIDENTIAL PUBLIC SCHOOL & RESIDENTIAL P.U. COLLEGE

Address: N.H-4, P. B. Road, Kamadod, Ranebennur, Dist : Haveri.
Ph: 8453005045, 6363834409 & 8710066322.

Best Wishes From

BSC SKY RAINBOW'S PRE-SCHOOL RAINBOW INDUSTRIES RAINBOW'S LITTLE MINDS PRE-SCHOOL



ನಿವೃತ್ತ ನ್ಯಾಯಾಧೀಶರಾದ ಶ್ರೀ ಜೆ. ಚನ್ನವೀರಪ್ಪ ನಿಧನ



ದಾವಣಗೆರೆ ಸಿಟಿ, ಎಂಸಿಸಿ ಬಿ ಬ್ಲಾಕ್ 3ನೇ ಮೇನ್, 6ನೇ ಕ್ರಾಸ್ ವಾಸಿ ನಿವೃತ್ತ ನ್ಯಾಯಾಧೀಶರಾದ

ಶ್ರೀ ಜೆ ಚನ್ನವೀರಪ್ಪ

ಇವರು ದಿನಾಂಕ 01-11-2024 ರಂದು ಶುಕ್ರವಾರ ರಾತ್ರಿ 9.25ಕ್ಕೆ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 92 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 02-11-2024ರ ಶನಿವಾರ ಬೆಳಿಗ್ಗೆ 10.00 ಗಂಟೆಯವರೆಗೆ ಎಂಸಿಸಿ 'ಬಿ' ಬ್ಲಾಕ್‌ನ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.


ನಂತರ ಅಂತ್ಯಕ್ರಿಯೆಯು ಹೂವಿನ ಹಡಗಲಿ ತಾಲ್ಲೂಕು ಹೊಳಲು ಗ್ರಾಮದ ಮೃತರ ಜಮೀನಿನಲ್ಲಿ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ.

ದು:ಖತಪ್ತ ಕುಟುಂಬ ವರ್ಗ

ಸುಮಾ ಬಳ್ಳಾರಿ ಮತ್ತು ಸೋಮಶೇಖರ್ ಬಳ್ಳಾರಿ - 94480 05254 / 99861 80453



60 ನೇ ಹುಟ್ಟುಹಬ್ಬದ ಶುಭಾಶಯಗಳು






ಶಾಮನೂರಿನ ಶ್ರೀ ಎಸ್.ಜಿ.ಮಲ್ಲಿಕಾರ್ಜುನ್ (ಬಾಬು)

ಅವರು ನಾಳೆ ದಿನಾಂಕ 03-11-2024 ರಂದು 60 ನೇ ವರ್ಷಕ್ಕೆ ಕಾಲಿಡುತ್ತಿದ್ದು, ಅವರಿಗೆ ಹಾರ್ದಿಕ ಶುಭಾಶಯಗಳು. ಶ್ರೀಯುತರು ನೂರಾರು ಕಾಲ ಸುಖ-ಶಾಂತಿಯಿಂದ ಬಾಳಲಿ ಎಂದು ಹಾರೈಸುತ್ತಾ, ದೇವರು ಅವರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಶುಭ ಕೋರುವವರು:

ಗೌಡ್ರು ವಂಶಸ್ಥರು, ಕೊಂಡಜ್ಜಿ ವಂಶಸ್ಥರು, ಶಾಮನೂರು.



ಕೆ.ಬಿ. ದರ್ಶನ್
ಶಾಮನೂರು



ಕೆ.ಬಿ. ಕಿಶನ್
ಶಾಮನೂರು

# ಕನ್ನಡಿಗರ ಮೇಲೆ ಅನ್ಯಭಾಷಿಕರ ಮೇಲಿನ ತೊಂದರೆ ನಿಯಂತ್ರಣ ಅವಶ್ಯ

**ಹರಿಹರ ತಾಲ್ಲೂಕು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್**



ಹರಿಹರ, ನ. 1 - ವಿವಿಧ ಪ್ರಾಂತಗಳಿಂದ ಕೂಡಿದ್ದ ಹಾಗೂ ರಾಜ-ರಾಣಿಯರ ಆಳ್ವಿಕೆಯ ನಾಡು ಎಂದು ಕರೆಯುತಿದ್ದ ಹಾಗೂ ಕನ್ನಡ ಭಾಷೆಯನ್ನಾಡುತ್ತಿದ್ದ ನಾಡನ್ನು ಒಂದುಗೂಡಿಸುವುದಕ್ಕಾಗಿ, ಅನೇಕರು ಶ್ರಮಿಸಿದ್ದಾರೆ. ಕರ್ನಾಟಕ ರಾಜ್ಯವೆಂದು ನಾಮಕರಣಗೊಳಿಸಲು ಆಲೂರು ವೆಂಕಟರಾಯರು ಸೇರಿದಂತೆ ಅನೇಕರು ಹೋರಾಟ ನಡೆಸಿದ್ದನ್ನು ನಾವಿಂದು ಸ್ಮರಿಸಬೇಕು. 1973 ಕ್ಕೂ ಪೂರ್ವದಲ್ಲಿ ಮೈಸೂರು ರಾಜ್ಯವೆಂದು ಕರೆಯುತ್ತಿದ್ದ ನಾಡು, ಕರ್ನಾಟಕ ರಾಜ್ಯವೆಂದು ನಾಮಕರಣಗೊಂಡು ಇಂದಿಗೆ 50 ವರ್ಷಗಳು ಗತಿಸಿವೆ ಎಂದು ಶಾಸಕ ಬಿ.ಪಿ ಹರೀಶ್ ಹೇಳಿದರು.

ನಗರದ ಮಹಾತ್ಮಗಾಂಧಿ ಮೈದಾನದಲ್ಲಿ ಶುಕ್ರವಾರ ತಾಲೂಕು ಆಡಳಿತ, ತಾಲೂಕು ಪಂಚಾಯತ, ನಗರಸಭೆ, ರಾಷ್ಟ್ರೀಯ ಹಾಗೂ ನಾಡ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿದರು.

ಕನ್ನಡ ನಾಡು, ನುಡಿ, ನೆಲ, ಜಲ ಭಾಷೆಗೆ ಹೆಸರಾದ ಕನ್ನಡಿಗರು ಸ್ವಾಭಿಮಾನಿಗಳು. ಶಾಂತಿ ಪ್ರಿಯರು. ಶಾಂತರೆಂದರೆ ಸುಮ್ಮನೆ ಇರುವವರಲ್ಲ. ಅನ್ಯಾಯಕ್ಕೆ ತಲೆಬಾಗುವವರಲ್ಲ. ಕ್ರಾಂತಿಗೂ ಸಿದ್ದರೆಂಬುದನ್ನು ಮರೆಯುವಂತೆಯು ಇಲ್ಲ. ಗಡಿನಾಡಿನಲ್ಲಿ ಅನ್ಯ ಭಾಷಿಕರು ಕನ್ನಡಿಗರ ಮೇಲೆ ನಿತ್ಯ ಒಂದಿಲ್ಲ ಒಂದು ರೀತಿಯಿಂದ ತೊಂದರೆ ನೀಡುತ್ತಾ ಬಂದಿದ್ದಾರೆ. ಅದರ ನಿಯಂತ್ರಣ ಅವಶ್ಯ ಎಂದು ಹೇಳಿದರು.

ರಾಷ್ಟ್ರೀಯ ಹಾಗೂ ನಾಡ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರೂ ಆಗಿರುವ ತಹಶೀಲ್ದಾರ್ ಕೆ.ಎಂ. ಗುರುಬಸವರಾಜ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆ ಹೃದಯಕ್ಕೆ ಹತ್ತಿರವಿರುವ ಭಾಷೆ. ಕಾವೇರಿಯಿಂದ ಗೋದಾವರಿವರೆಗೆ ವಿಸ್ತರಣೆಗೊಂಡಿರುವುದು. ಕನ್ನಡ ನಾಡು, ನುಡಿ. ನೆಲ. ಜಲ ಭಾಷೆಯ ಅಭಿವೃದ್ಧಿಗಾಗಿ ಶ್ರಮಿಸಿದ ಕವಿಗಳನ್ನು, ಹೋರಾಟಗಾರರನ್ನು, ಸಾಹಿತಿಗಳ ಶ್ರಮದ ಫಲವಾಗಿ ಇಂದು ಕನ್ನಡ ಕಂಗೊಳಿಸುತ್ತಿದೆ ಎಂದರು.

ಕರ್ನಾಟಕ ಏಕೀಕರಣಕ್ಕೆ ಮೊದಲು ನಾಂದಿ ಹಾಡಿದವರು ಧಾರವಾಡದ ವಿದ್ಯಾವರ್ಧಕ ಸಂಘದವರು. ಕನ್ನಡಿಗರಿಂದ ಕೂಡಿದ್ದ ನಾಡನ್ನು ಕರ್ನಾಟಕವೆಂದು ನಾಮಕರಣಗೊಳಿಸಲು ಎಲ್ಲರನ್ನು ನಾವಿಂದು ಸ್ಮರಿಸಲೇಬೇಕೆಂದು ಹೇಳಿದರು.

ಗುರು ತಿಪ್ಪೇರುದ್ರಸ್ವಾಮಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಿ.ಬಿ ರೇವಣನಾಯ್ಕ್ ಕಾರ್ಯಕ್ರಮ ಕುರಿತು ಉಪನ್ಯಾಸ ನೀಡಿದರು. ಈ ಸಮಯದಲ್ಲಿ ನಗರಸಭೆಯ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಡಿ.ಎಂ ಮಂಜುನಾಥಯ್ಯ, ನಗರಸಭೆಯ ಪೌರಾಯುಕ್ತ ಸುಬ್ರಮಣ್ಯ ಶೆಟ್ಟಿ ಪಿ, ಕ್ಷೇತ್ರ ಶಿಕ್ಷಣಾಧಿಕಾರಿ ದುರುಗಪ್ಪ ಡಿ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಸುಮಲತಾ ಎಸ್.ಪಿ, ಆರಕ್ಷಕ ವೃತ್ತ ನಿರೀಕ್ಷಕ ಎಸ್. ದೇವಾನಂದ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಮೃದ್ಧ ಕನ್ನಡ ನಾಡಿನಲ್ಲಿ ಜನಿಸಿರುವುದೇ ಅದೃಷ್ಟ

## ಹರಪನಹಳ್ಳಿ ಕನ್ನಡ ರಾಜ್ಯೋತ್ಸವದಲ್ಲಿ ಶಾಸಕರಾದ ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ನ. 1- ಕನ್ನಡ ನಾಡು ಎಂಬ ಹೆಸರಿಗೇ ಒಂದು ಧೀಮಂತ ಶಕ್ತಿ ಇದೆ. ಇಂತಹ ಸುಂದರ, ಸಮೃದ್ಧ ನಾಡಿನಲ್ಲಿ ಜನಿಸಿರುವುದು ನಮ್ಮೆಲ್ಲರ ಅದೃಷ್ಟ ಎಂದು ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಚರಿಸಲಾಗಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ದರು.

ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾವ್ ಅವರು ಕರ್ನಾಟಕ ಏಕೀಕರಣ ಚಳುವಳಿ ಮಾಡುವ ಮೂಲಕ ಕನ್ನಡ ನಾಡು, ನುಡಿಗೆ ಶ್ರಮಿಸಿದರು. ರಾಜ್ಯೋತ್ಸವವನ್ನು ನವೆಂಬರ್ 1ರಂದು ಮಾತ್ರವಲ್ಲದೇ ಇಡೀ ತಿಂಗಳು ರಾಜ್ಯದ ಎಲ್ಲೆಡೆ ಮಾತ್ರವಲ್ಲದೇ, ವಿದೇಶಗಳಲ್ಲೂ ಸಹ ಕನ್ನಡಿಗರು ಆಚರಿಸುತ್ತಾರೆ. ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಕಲೆ, ಭಾಷೆ ಬಗ್ಗೆ ನೆನೆದು ಮೆಲುಕು ಹಾಕುವುದು ಸಾಮಾನ್ಯವಾಗಿದೆ ಎಂದರು.

ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಧ್ವಜಾರೋಹಣ ನೇರವೇರಿಸಿ ಮಾತನಾಡಿ, ಆಲೂರು ವೆಂಕಟರಾವ್ ರವರು 1905 ರಲ್ಲಿ ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ರಾಜ್ಯವನ್ನು ಏಕೀಕರಿಸುವ ಕನಸು ಕಂಡ ಮೊದಲ ವ್ಯಕ್ತಿ. ಬೇರೆ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಒಗ್ಗೂಡಿಸಿ 1973ರಲ್ಲಿ ಕರ್ನಾಟಕವೆಂದು ನಾಮಕರಣ ಮಾಡಲಾಯಿತು. ಏಕೀಕರಣಕ್ಕೆ ಶ್ರಮಿಸಿದವರಲ್ಲಿ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್,



ಕೆ.ಶಿವರಾಮ ಕಾರಂತ, ಎ.ಎನ್ ಕೃಷ್ಣರಾವ್ ಮತ್ತು ಬಿ.ಎಂ ಶ್ರೀಕಂಠಯ್ಯ ಪ್ರಮುಖ ರಾಗಿದ್ದಾರೆ ಎಂದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ಕರ್ನಾಟಕ ತನ್ನದೇ ಆದ ಶ್ರೀಮಂತ ಪರಂಪರೆ, ಸಂಸ್ಕೃತಿ, ಇತಿಹಾಸ ಹೊಂದಿರುವ ಪಾವನ ಭೂಮಿ. ಕಲೆ, ಸಾಹಿತ್ಯಕ್ಕೆ ತವರೂರಿದು. ಕನ್ನಡ ಬರೀ ಭಾಷೆಯಲ್ಲ, ಅದು ನಮ್ಮ ಉಸಿರು, ಬದುಕು. ಭವ್ಯ ಇತಿಹಾಸ ಹಾಗೂ ಪರಂಪರೆಯನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಹಾಕದೇ ಇರುವುದು ಏಳು ಕೋಟಿ ಕನ್ನಡಿಗರಿಗೆ ಮಾಡಿದ ಅಪಮಾನವಾಗಿದೆ. ಮುಂದೆ ಇಂತಹ ತಪ್ಪುಗಳು ಆಗಬಾರದು ಎಂದು ಮನವಿ ಮಾಡಿದರು.

ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಎನ್.ಜಿ.ಮನೋಹರ, ಕನ್ನಡ ರಾಜ್ಯೋತ್ಸವ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಗಿರಜ್ಜಿ ನಾಗರಾಜ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ ಅಂಜಿನಪ್ಪ, ತಹಶೀಲ್ದಾರ್ ಬಿ.ವಿ ಗಿರೀಶ ಬಾಬು, ಕಾರ್ಯ ನಿರ್ವಹಣಾಧಿಕಾರಿ ಚಂದ್ರಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಲೇಪಾಕ್ಷಪ್ಪ, ಪುರಸಭೆ ಮುಖ್ಯಾಧಿಕಾರಿ ಯರಗುಡಿ ಶಿವಕುಮಾರ್, ಸಾಹಿತಿ ಇಸ್ಮಾಯಿಲ್ ಎಲಿಗಾರ್, ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ, ಪುರಸಭೆ ಸದಸ್ಯರಾದ ಟಿ.ವೆಂಕಟೇಶ, ಡಿ.ಅಬ್ದುಲ್ ರಹಿಮಾನ್ ಸಾಬ್, ಲಾಟಿ ದಾದಾಪೀರ್, ಜಾಕೀರ್. ಜೋಗಿನ ಭರತೇಶ, ಚಿಕ್ಕೇರಿ ಹನುಮಕ್ಕ, ಇ.ಸಿ.ಓ ಗಿರಜ್ಜಿ ಮಂಜುನಾಥ ಸೇರಿದಂತೆ ಇತರರು ಇದ್ದರು.

# ದೊಡ್ಡಬಾತಿಯಲ್ಲಿ ನಾಳೆ ಬ್ರಹ್ಮಾಕುಮಾರೀಸ್ ಸಂಸ್ಥೆಯ ನೂತನ ಕಟ್ಟಡಕ್ಕೆ ಭೂಮಿ ಪೂಜೆ

ದಾವಣಗೆರೆ, ನ.1- ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ದೊಡ್ಡಬಾತಿ ಶಾಖೆಯ ನೂತನ ಕಟ್ಟಡದ ಭೂಮಿ ಪೂಜಾ ಸಮಾರಂಭವು ನಾಡಿದ್ದು ದಿನಾಂಕ 3ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ದೊಡ್ಡಬಾತಿ ಗ್ರಾಮದ ಬ್ರಹ್ಮಾಕುಮಾರೀಸ್ ಸೇವಾ ಕೇಂದ್ರದ ಆವರಣದಲ್ಲಿ ನಡೆಯಲಿದೆ.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ದಿವ್ಯ ಸಾನ್ನಿಧ್ಯದಲ್ಲಿ ದೊಡ್ಡಬಾತಿಯ ಚನ್ನಯ್ಯ ಒಡೆಯರ್ ಭೂಮಿ ಪೂಜೆಯನ್ನು ನೆರವೇರಿಸಲಿದ್ದು, ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಜೆಸಿಬಿ ಹನುಮಂತಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ದೊಡ್ಡಬಾತಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಭಾನುವಳ್ಳಿ ಸಿದ್ದಪ್ಪ, ದೊಡ್ಡಬಾತಿ ಗ್ರಾಮ ಪಂಚಾಯ್ತಿ ಸದಸ್ಯ ಕೆ.ಜಿ. ಉಮೇಶ್, ಶ್ರೀಮತಿ ಬಿ.ಜಿ. ಪ್ರಭಾವತಿ ಹೇಮಾರೆಡ್ಡಿ ಗುಳುಕಾಯಿ, ತಪೋವನದ ಅಧ್ಯಕ್ಷ ಶಶಿಕುಮಾರ್ ವಿ. ಮೆಹರ್ವಾಡೆ, ಮುಖಂಡ ಬೆಳ್ಳೂಡಿ ಶಿವಕುಮಾರ್, ಪ್ರಾಧ್ಯಾಪಕ ಡಾ. ಬಿ. ಬಸವರಾಜಪ್ಪ, ವಿಎಸ್ಎಸ್ಎನ್ ನಿರ್ದೇಶಕ ಬಿ.ಜಿ. ವಿಶ್ವಾಂಭರ, ಮಲೇಬೆನ್ನೂರಿನ ಅಕ್ಕಿ ವರ್ತಕರಾದ ರುದ್ರಪ್ಪ, ಪಂಚಣ್ಣ, ವಕೀಲ ಡಾ. ಮಲ್ಲಿಕಾರ್ಜುನ ಕಲಾಲ್, ದೊಡ್ಡಬಾತಿ ಮುಖಂಡರುಗಳಾದ ಕೆ.ಜಿ. ರೇವಣಸಿದ್ದಪ್ಪ, ಕೆ.ಜಿ. ಬಸವರಾಜಪ್ಪ, ಬಿದರಿ ಶಿವಾನಂದ ಗೌಡ್ರು, ರೈತ ಮುಖಂಡರಾದ ಸಾಲಕಟ್ಟೆ ವೀರೇಶ್, ದೊಡ್ಡಯಲ್ಲಪ್ಪರ ಮಂಜುನಾಥ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸುವಂತೆ ಬ್ರಹ್ಮಾಕುಮಾರೀಸ್ ಸಂಸ್ಥೆಯ ದೊಡ್ಡಬಾತಿ ಸಂಸ್ಥೆಯ ಸಂಚಾಲಕರಾದ ಬ್ರಹ್ಮಾಕುಮಾರಿ ಗೌರ ಅವರು ವಿನಂತಿಸಿದ್ದಾರೆ.

# ಬಾಂಗ್ಲಾಗೆ ಅದಾನಿ ಕಂಪನಿ ವಿದ್ಯುತ್ ಅರ್ಧ ಕಟ್

**846 ದಶಲಕ್ಷ ಡಾಲರ್ ಪಾವತಿ ಬಾಕಿ ಉಳಿಸಿಕೊಂಡದ್ದಕ್ಕೆ ಕ್ರಮ**

ಢಾಕಾ, ನ. 1- ಬಾಂಗ್ಲಾದೇಶ ಹಣ ಪಾವತಿಸಿದ ಕಾರಣ, ಆ ದೇಶಕ್ಕೆ ಪೂರೈಸಲಾಗುವ ವಿದ್ಯುತ್ತನ್ನು ಅದಾನಿ ಕಂಪನಿಯೊಂದು ಅರ್ಧದಷ್ಟು ನಿಲ್ಲಿಸಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ. ಅದಾನಿ ಪವರ್ ಮಾಲೀಕತ್ವದ ಅದಾನಿ ಪವರ್ ಜಾರ್ಖಂಡ್ ಲಿಮಿಟೆಡ್ (ಎ.ಪಿ.ಜೆ.ಎಲ್.) ಬಾಂಗ್ಲಾದೇಶಕ್ಕೆ ವಿದ್ಯುತ್ ಪೂರೈಕೆ ಮಾಡುತ್ತಿತ್ತು.

ಗುರುವಾರ ರಾತ್ರಿಯಿಂದ ಅದಾನಿ ಘಟಕದಿಂದ ಪೂರೈಕೆ ಆಗುವ ವಿದ್ಯುತ್ ಕಡಿಮೆಯಾಗಿದೆ. ಪವರ್ ಗ್ರಿಡ್ ಬಾಂಗ್ಲಾದೇಶ್ ಪಿ.ಎಲ್.ಸಿ. ಮೂಲಕ ಪಡೆಯಲಾದ ಮಾಹಿತಿಯಲ್ಲಿ ಈ ವಿವರ ದೊರೆತಿದೆ ಎಂದು ದಿ ಡೈಲಿ ಸ್ಟಾರ್ ಪತ್ರಿಕೆ ವರದಿ ಮಾಡಿದೆ.

ಗುರುವಾರ ಹಾಗೂ ಶುಕ್ರವಾರದ ನಡುವಿನ ರಾತ್ರಿಯಲ್ಲಿ ಬಾಂಗ್ಲಾದೇಶ 1600 ಮೆಗಾ ವ್ಯಾಟ್ ವಿದ್ಯುತ್ ಕೊರತೆ ಎದುರಿಸಿತ್ತು. 1,496 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೊಂದಿರುವ ಅದಾನಿ ಘಟಕ ಈಗ 700 ಮೆಗಾ ವ್ಯಾಟ್ ವಿದ್ಯುತ್ ಮಾತ್ರ ಉತ್ಪಾದಿಸುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಬಾಂಗ್ಲಾದೇಶವು ಅದಾನಿ ಘಟಕಕ್ಕೆ 846 ದಶಲಕ್ಷ ಡಾಲರ್ ಹಣ ಪಾವತಿಸಬೇಕಿದೆ. ಬಾಕಿ ಹಣವನ್ನು ಅಕ್ಟೋಬರ್ 30ರ ಒಳಗೆ ಪಾವತಿಸಬೇಕು ಎಂದು ಕೇಳಿ ಬಾಂಗ್ಲಾದೇಶ ವಿದ್ಯುತ್ ಅಭಿವೃದ್ಧಿ ಮಂಡಳಿ (ಪಿ.ಡಿ.ಬಿ.)ಗೆ ಅದಾನಿ ಸಮೂಹ ಪತ್ರ ಬರೆದಿತ್ತು. ಬಾಕಿ ಹಣ ಪಾವತಿಸದೇ ಇದ್ದರೆ, ವಿದ್ಯುತ್ ಖರೀದಿ ಒಪ್ಪಂದದ ಅನ್ವಯ ಕ್ರಮ ತೆಗೆದುಕೊಳ್ಳುವುದು ಕಠಿಣವಾಗಲಿದೆ ಎಂದು ಅಕ್ಟೋಬರ್ 27ರಂದು ಬರೆದ ಪತ್ರದಲ್ಲಿ ತಿಳಿಸಲಾಗಿತ್ತು.

170.3 ದಶಲಕ್ಷ ಡಾಲರ್ ಹಣಕ್ಕಾಗಿ ಪಿ.ಡಿ.ಪಿ.ಯು ಬಾಂಗ್ಲಾದೇಶ್ ಕೃಷಿ ಬ್ಯಾಂಕ್ ಮೂಲಕ ಸಾಲಪತ್ರವನ್ನೂ ಕೊಟ್ಟಿಲ್ಲ ಹಾಗೂ ಬಾಕಿ ಇರುವ 846 ದಶಲಕ್ಷ ಡಾಲರ್ ಹಣವನ್ನೂ ಪಾವತಿಸಿಲ್ಲ ಎಂದು ಅದಾನಿ ಸಮೂಹ ಹೇಳಿದೆ.

ಹಿಂದಿನ ಬಾಕಿಯನ್ನು ಈಗಾಗಲೇ ಪಾವತಿಸಲಾಗಿದೆ. ಆದರೆ, ಜುಲೈ ತಿಂಗಳ ನಂತರ ಅದಾನಿ ಸಮೂಹ ಹಿಂದಿನ ತಿಂಗಳಿಗಿಂತ ಹೆಚ್ಚು ಶುಲ್ಕ ವಿಧಿಸಿದೆ ಎಂದು ಪಿ.ಡಿ.ಬಿ. ಅಧಿಕಾರಿಗಳು ಹೇಳಿದ್ದಾರೆ.

ಪ್ರತಿ ವಾರ 18 ದಶಲಕ್ಷ ಡಾಲರ್ ಹಣ ಪಾವತಿಸಲಾಗುತ್ತಿದೆ. ಆದರೆ, ಶುಲ್ಕ ಈಗ 22 ದಶಲಕ್ಷ ಡಾಲರ್‌ಗಿಂತಲೂ ಹೆಚ್ಚಾಗಿದೆ ಎಂದು ಪಿ.ಡಿ.ಬಿ. ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹೀಗಾಗಿ ವಿದ್ಯುತ್ ಶುಲ್ಕ ಪಾವತಿ ಬಾಕಿ ಉಳಿದಿದೆ. ಕಳೆದ ವಾರವೇ ಕೃಷಿ ಬ್ಯಾಂಕ್‌ಗೆ ಹಣವನ್ನು ಪಾವತಿಸಲಾಗಿದೆ. ಆದರೆ ಡಾಲರ್ ಕೊರತೆ ಕಾರಣದಿಂದಾಗಿ ಬ್ಯಾಂಕ್ ಸಾಲ ಪತ್ರ ನೀಡಲು ಸಾಧ್ಯವಾಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

ಕಲ್ಲಿದ್ದಲು ಬೆಲೆಗೆ ಸಂಬಂಧಿಸಿದಂತೆ ಕಳೆದ ಫೆಬ್ರವರಿಯಲ್ಲಿ ಪಿ.ಡಿ.ಬಿ. ಆಕ್ಷೇಪ ದಾಖಲಿಸಿತ್ತು. ಇತರೆ ಕಲ್ಲಿದ್ದಲು ವಿದ್ಯುತ್ ಘಟಕಗಳಿಗಿಂತ ಕಡಿಮೆ ಬೆಲೆಗೆ ಕಲ್ಲಿದ್ದಲು ಬೆಲೆ ನಿಗದಿ ಪಡಿಸಬೇಕು ಎಂಬ ಒಪ್ಪಂದಕ್ಕೆ ಅದಾನಿ ಸಮೂಹ ಸಹಿ ಹಾಕಿತ್ತು ಎಂದು ಅಧಿಕಾರಿ ಹೇಳಿದ್ದಾರೆ.

## ಮುರುಘಾ ಮಠದಲ್ಲಿ ಇಂದು ಚೆನ್ನಬಸವಣ್ಣ ಜಯಂತಿ

ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಜಗದ್ಗುರು ಮುರುಘಾ ರಾಜೇಂದ್ರ ಬೃಹನ್ಮಠದ ಕರ್ತೃ ಮುರುಗಿ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳ ಗದ್ದುಗೆ ಮುಂಭಾಗದಲ್ಲಿ ಜ್ಞಾನ ನಿಧಿ-ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣ ಅವರ ಜಯಂತಿ ಆಚರಣೆ ಮಾಡಲಾಗುವುದು ಎಂದು ಶ್ರೀಮಠವು ತಿಳಿಸಿದೆ.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್.ಜೆ.ಎಂ. ವಿದ್ಯಾಪೀಠದ ಅಧ್ಯಕ್ಷರಾದ ಶಿವಯೋಗಿ ಸಿ. ಕಳಸದ ಹಾಗೂ ಸದಸ್ಯರಾದ ಡಾ. ಬಸವಕುಮಾರ ಸ್ವಾಮಿಗಳವರು ಭಾಗವಹಿಸಲಿದ್ದಾರೆ.

## ಜಿಎಸ್‌ಟಿ ಸಂಗ್ರಹ

**(1ನೇ ಪುಟದಿಂದ)** ಅಕ್ಟೋಬರ್ 2023ಕ್ಕೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ.8.9ರಷ್ಟು ಹೆಚ್ಚಳವಾಗಿದೆ. ಅಕ್ಟೋಬರ್ 2023ರಲ್ಲಿ ಜಿ.ಎಸ್.ಟಿ. ಸಂಗ್ರಹ 1.72 ಲಕ್ಷ ಕೋಟಿ ರೂ. ಆಗಿತ್ತು. ಅಕ್ಟೋಬರ್ 2024ರಲ್ಲಿ ಜಿ.ಎಸ್.ಟಿ. ತೆರಿಗೆ ಸಂಗ್ರಹ ಎರಡನೇ ಅತಿ ಹೆಚ್ಚಿನ ಹಂತದಲ್ಲಿದೆ. ಏಪ್ರಿಲ್ 2024ರಲ್ಲಿ 2.10 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು.

# ಭಾರತದಲ್ಲಿರುವಷ್ಟು ಸಂಪ್ರದಾಯ, ಪರಂಪರೆ ಬೇರೆ ಯಾವ ದೇಶದಲ್ಲೂ ಇಲ್ಲ

## ಮಲೇಬೇನ್ನೂರಿನ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಅಭಿಮತ

ಮಲೇಬೆನ್ನೂರು, ನ.1- ಭಾರತೀಯ ಸಂಸ್ಕೃತಿ ಬಹಳ ದೊಡ್ಡದಿದ್ದು, ಈ ದೇಶದಲ್ಲಿರುವಷ್ಟು ಸಂಪ್ರದಾಯ ಮತ್ತು ಪರಂಪರೆಗಳು ಬೇರೆ ಯಾವ ದೇಶದಲ್ಲೂ ಇಲ್ಲ ಎಂದು ರಂಭಾಪುರಿ ಜಗದ್ಗುರು ಪೀಠದ ಶ್ರೀ ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಪಟ್ಟಣದ ಶ್ರೀ ಗುರು ರೇಣುಕಾ ರೈಸ್ ಇಂಡಸ್ಟ್ರೀಸ್‌ನಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಇಂದು ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ದೇಶದಲ್ಲಿರುವ ಎಲ್ಲಾ ಸಂಪ್ರದಾಯ, ಪರಂಪರೆ ಮತ್ತು ಧರ್ಮಗಳು ಮಾನವ ಕಲ್ಯಾಣವನ್ನೇ ಬಯಸಿವೆ. ಆದರೆ, ಮನುಷ್ಯ ಇದನ್ನು ಅರ್ಥ ಮಾಡಿಕೊಳ್ಳದೆ ದಾರಿ, ದಿಕ್ಕು ತಪ್ಪಿ ನಡೆಯುತ್ತಿದ್ದಾನೆಂದು ಶ್ರೀಗಳು ಬೇಸರ ವ್ಯಕ್ತಪಡಿಸಿದರು. ದಾರಿ, ದಿಕ್ಕು ತಪ್ಪಿ ನಡೆಯುವ ಜನರಿಗೆ ಗುರುವಿನ ಮಾರ್ಗದರ್ಶನ ಸಿಕ್ಕರೆ ಅವರೂ ಉತ್ತಮ ದಾರಿಗೆ ಬರುತ್ತಾರೆಂಬ ವಿಶ್ವಾಸ ವ್ಯಕ್ತಪಡಿಸಿದ ಶ್ರೀಗಳು, ಎಲ್ಲಾ ಧರ್ಮಗಳಲ್ಲಿ ಗುರುವಿಗೆ ಪ್ರಥಮ ಸ್ಥಾನ ಇದ್ದು, ಅವರವರ ಧರ್ಮ ಅವರಿಗೆ ಶ್ರೇಷ್ಠವಾಗಿರುವುದರಿಂದ ಎಲ್ಲರೂ ಪರ ಧರ್ಮ ಸಹಿಷ್ಣುತೆ ಬೆಳೆಸಿಕೊಳ್ಳಬೇಕೆಂದರು.

ಭಾರತೀಯ ಪರಂಪರೆಯಲ್ಲಿ ಪ್ರತಿಯೊಂದು ಹಬ್ಬದ ಆಚರಣೆಗೂ ಒಂದೊಂದು ಹಿನ್ನೆಲೆ ಮತ್ತು ಅರ್ಥ ಇದೆ. ದೀಪಾವಳಿ ಹಬ್ಬ ಹಿಂದೂ ಧರ್ಮದಲ್ಲಿ ಅತ್ಯಂತ ವಿಶೇಷತೆ ಪಡೆದುಕೊಂಡಿದ್ದು, ಅಮಾವಾಸ್ಯೆ ದಿನದಂದೇ ಮಹಾಲಕ್ಷ್ಮಿ ಪೂಜೆ ಆಚರಿಸುವುದರ



ಜೊತೆಗೆ ಅಜ್ಞಾನದ ಕತ್ತಲೆಯನ್ನು ದೂರ ಮಾಡಿ ಜ್ಞಾನದ ಬೆಳಕು ಬೆಳಗಿಸುವ ಶಕ್ತಿ ಹೊಂದಿದೆ.

ದೇವರ ಮುಂದೆ ದೀಪ ಬೆಳಗಿದರೆ ನಂದಾ ದೀಪವಾಗುತ್ತದೆ. ಅದೇ ದೀಪವನ್ನು ಕತ್ತಲಲ್ಲಿ ಬೆಳಗಿದರೆ ಬೆಳಕು ನೀಡುತ್ತದೆ. ಮನುಷ್ಯ ಬೆಂಗಿ ಆಗದೆ, ದೀಪವಾಗಿ ಜಗತ್ತನ್ನು ಬೆಳಗಿಸುವ ಕೆಲಸ ಮಾಡಬೇಕೆಂದು ರಂಭಾಪುರಿ ಶ್ರೀಗಳು ಆಶಯ ವ್ಯಕ್ತಪಡಿಸಿದರು.

ಸೂಡಿ-ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿ, ದೀಪಾವಳಿ ಹಬ್ಬದ ಮಹತ್ವ ತಿಳಿಸಿ, ಬದುಕಿನ ಉದ್ಧಾರಕ್ಕೆ ಗುರು ಸ್ಥಾನ ಬಹಳ ಮುಖ್ಯ ಎಂಬುದನ್ನು ಅರ್ಥೈಸಿದರು.

ಹಿರಿಯರಾದ ಬಿ.ಎಂ. ನಂಜಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಹನಗವಾಡಿ ವೀರೇಶ್, ಚಂದ್ರಶೇಖರ್ ಪೂಜಾರ್, ಜಿ. ಮಂಜುನಾಥ್ ಪಟೇಲ್, ಎಂ. ಕರಿಬಸಯ್ಯ, ಜಿಗಳಿ ಆನಂದಪ್ಪ, ಬಿ. ವೀರಯ್ಯ, ಕೆ.ಜಿ. ವೀರನಗೌಡ್ರು, ಮುದೇಗೌಡ್ರ ತಿಪ್ಪೇಶ್, ಹಿಂಡಸಘಟ್ಟೆ ಮೃತ್ಯುಂಜಯ, ಬಾ.ಮ. ಬಸವರಾಜಯ್ಯ, ಬಕ್ಕೇಶ್ ನಾಗನೂರು, ಎಂ.ಬಿ. ಅಬೀದ್ ಅಲಿ, ಗೋವಿನಹಾಳ್ ರಾಜಣ್ಣ, ಐರಣಿ ಅಣ್ಣಪ್ಪ, ಎಸ್.ಜಿ. ಉಳುವಯ್ಯ, ಬಿ.ಎಂ. ಹಾಲಸ್ವಾಮಿ, ಅಕ್ಕಿ ರಾಜು, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಮಂಜುನಾಥ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಕೆ.ಜಿ. ಲೋಕೇಶ್, ಸಾಬೀರ್ ಅಲಿ, ಖಲೀಲ್, ಭೋವಿ ಶಿವು, ಕೆ.ಪಿ. ಗಂಗಾಧರ್, ಭಾನುವಳ್ಳಿ ಸುರೇಶ್, ಪಿ.ಆರ್. ರಾಜು, ಪೆಟ್ರೋಲ್ ಬಂಕ್ ಪ್ರಕಾಶ್, ಪಿಎಸಿಎಸ್ ಅಧ್ಯಕ್ಷ ಯುನೂಸ್, ಪಿ.ಆರ್. ಕುಮಾರ್, ಪಿ.ಹೆಚ್. ಶಿವಕುಮಾರ್, ಕುಂಬಳೂರು ವಾಸು, ಜಿಗಳಿಯ ಬಿ.ಎಂ. ದೇವೇಂದ್ರಪ್ಪ, ನಾಗೇನಹಳ್ಳಿ ಮಹೇಶ್ವರಪ್ಪ, ಜಿ.ಪಿ. ಹನುಮಗೌಡ, ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಹೆಚ್.ಎಸ್. ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಬಿ.ಎಂ. ಜಗದೀಶ್ವರಸ್ವಾಮಿ ಸ್ವಾಗತಿಸಿದರು. ಬಿ.ಎಂ. ವಾಗೀಶ್‌ಸ್ವಾಮಿ ವಂದಿಸಿದರು. ಬಿ.ಎಂ. ಚನ್ನೇಶ್‌ಸ್ವಾಮಿ ನಿರೂಪಿಸಿದರು.

# ನಗರದ ಎಪಿಎಂಸಿ ಅಡಿಕೆ ವರ್ತಕರಿಂದ ರಾಜ್ಯೋತ್ಸವ ಆಚರಣೆ



ದಾವಣಗೆರೆ, ನ.1- ನಗರದ ಎಪಿಎಂಸಿ ಅಡಿಕೆ ವರ್ತಕರಿಂದ ವಿಠಲಾಪುರದ ಹನುಮಪ್ಪ ಅಂಡ್ ಸನ್ಸ್ ಅವರ ಅಡಿಕೆ ದಲಾಲಿ ಮಂಡಿಯಲ್ಲಿ 69ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ರಾಜ್ಯೋತ್ಸವದ ಪ್ರಯುಕ್ತ ಎಪಿಎಂಸಿ ಅಡಿಕೆ ಮಂಡಿಯ ಪ್ರಾಂಗಣದ ಎಲ್ಲಾ ಮಂಡಿಗಳ ಮುಂದೆ ತಳಿರು ತೋರಣ ಹಾಗೂ ಕನ್ನಡ ಬಾವುಟಗಳಿಂದ ಕಂಗೊಳಿಸುತ್ತಿದ್ದು ರಾಜ್ಯೋತ್ಸವ ಸಂಭ್ರಮದಿಂದ ಕೂಡಿತ್ತು.

ಸದಾ ಲೆಕ್ಕ-ಬುಕ್ಕ, ತೂಕ-ವ್ಯವಹಾರ ಎನ್ನುತ್ತಿದ್ದ ಎಂಪಿಎಂಸಿ ಅಡಿಕೆ ವರ್ತಕರು, ದಲಾಲರು ಎಲ್ಲದನ್ನೂ ಮರೆತು ಕನ್ನಡ ರಾಜ್ಯೋತ್ಸವದಲ್ಲಿ ಪಾಲ್ಗೊಂಡು ಕನ್ನಡ ನಾಡು-ನುಡಿ-ಸಂಸ್ಕೃತಿ-ಸಾಹಿತ್ಯದ ಬಗ್ಗೆ ಮಾತನಾಡಿದರು. ಮೊದಲಿಗೆ ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಂ. ಬಸವರಾಜಪ್ಪ, ಕುಕ್ಕುವಾಡ ಸುರೇಂದ್ರಪ್ಪ, ಮುದೇಗೌಡ್ರು ಗಿರೀಶ್, ರಾಮಗೊಂಡನಹಳ್ಳಿ ಜಯಣ್ಣ, ಬನಶಂಕರಿ ಸದಾನಂದ, ರಾಮಗೊಂಡನಹಳ್ಳಿ ಬಸವರಾಜ್, ಬಾಡದ ಸೋಮಶೇಖರಪ್ಪ, ಎಂ. ವೀರಬಸಪ್ಪ ಬೇತೂರು, ಬನಶಂಕರಿ ಶಿವಶಂಕರ್, ಬೆಳ್ಳುಳ್ಳಿ ಗುರುಸ್ವಾಮಿ, ರೇಣುಕಾಂಬ ನಾಗರಾಜ್, ವಿಠಲಾಪುರ ಕಿರಣ್, ಷಡಕ್ಷರಪ್ಪ ಎಂ. ಬೇತೂರು, ತೊಗಲೇರಿ ಮುರುಗೇಶ್, ಮಳಲಕೆರೆ ದರ್ಶನ್, ಭರಮಸಾಗರ ಮಹಾಂತೇಶ್, ಎಸ್.ಎನ್.ಟಿ. ತಿಪ್ಪಣ್ಣ, ಯಲವಟ್ಟಿ ಅಣ್ಣಪ್ಪ, ರಿಷಬ್ ವಿಠಲಾಪುರ ಇತರೆ ದಲಾಲಿ ವರ್ತಕರು ಹಾಗೂ ರೈತರು, ಶ್ರಮಿಕ ವರ್ಗದವರು ಉಪಸ್ಥಿತರಿದ್ದರು.

# ಹರಿಹರ : ನದಿಯಲ್ಲಿ ಮುಳುಗಿ ಇಬ್ಬರ ಸಾವು

ಹರಿಹರ, ಅ. 1 - ಟ್ರ್ಯಾಕ್ಟರ್ ತೊಳೆಯಲು ಹೋಗಿದ್ದ ಚಿಕ್ಕಪ್ಪ ಮತ್ತು ಅಣ್ಣನ ಮಗ ನದಿ ನೀರಲ್ಲಿ ಮುಳುಗಿ ಮರಣ ಹೊಂದಿದ ಘಟನೆ ಗುರುವಾರ ನಗರದ ಹೊರವಲಯದ ಗುತ್ತೂರು ಬಳಿ ನಡೆದಿದೆ.





ರೈತ ಅಣ್ಣಪ್ಪ ಪಿ. ಗಿಡ್ಡಬಸಪ್ಪರ್ (46) ಮತ್ತು ಇವರ ಅಣ್ಣನ ಪುತ್ರ ಪ್ರಶಾಂತ್ ಪಿ. ಗಿಡ್ಡಬಸಪ್ಪರ್ (15) ಮೃತ ದುರ್ದೈವಿಗಳು.

ದೀಪಾವಳಿ ಅಮಾವಾಸ್ಯೆ ನಿಮಿತ್ತ ತಮಗೆ ಸೇರಿದ ಟ್ರ್ಯಾಕ್ಟರ್ ತೊಳೆಯಲು ಅಣ್ಣಪ್ಪ ಅವರು ಗ್ರಾಮ ಸಮೀಪದ ನದಿಗೆ ಬೆಳಿಗ್ಗೆ 10ಕ್ಕೆ ಬಂದಿದ್ದಾರೆ. ಶಾಲೆ ರಜೆ ಇರುವ ಕಾರಣ ಸೇಂಟ್ ಮೇರೀಸ್ ಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ ಅಣ್ಣ ಪ್ರಕಾಶ್ ಗಿಡ್ಡಬಸಪ್ಪರ್ ಇವರ ಪುತ್ರನಾದ ಪ್ರಶಾಂತ್‌ನನ್ನು ಕರೆದುಕೊಂಡು ಹೋಗಿದ್ದಾರೆ.


ಜೊತೆಯಲ್ಲಿದ್ದ ನೀರಿನ ಬಕೆಟ್ ನೀರಲ್ಲಿ ತೇಲುತ್ತಾ ಹೋಗುತ್ತಿರುವುದನ್ನು ಗಮನಿಸಿದ ಪ್ರಶಾಂತ್ ಅದನ್ನು ಹಿಡಿಯಲು ನೀರಿನಲ್ಲಿ ಸ್ವಲ್ಪ ಮುಂದಕ್ಕೆ ಹೋಗಿದ್ದಾನೆ, ಆಗ ಅಲ್ಲಿನ ಗುಂಡಿಯ ನೀರಲ್ಲಿ ಮುಳುಗಲು ಆರಂಭಿಸಿದ್ದಾನೆ.

ಪ್ರಶಾಂತ್‌ನನ್ನು ರಕ್ಷಿಸಲು ಧಾವಿಸಿದ ಅಣ್ಣಪ್ಪನವರೂ ಗುಂಡಿಯ ಸೆಳೆವಿಗೆ ಸಿಲುಕಿ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಕೆಲವು ಗ್ರಾಮಸ್ಥರು ಧಾವಿಸಿದರೂ ಅವರನ್ನು ರಕ್ಷಿಸಲಾಗಲಿಲ್ಲ. ನಂತರ ಮುಳುಗು ತಜ್ಞರು ಆಗಮಿಸಿ ಇಬ್ಬರ ದೇಹಗಳನ್ನು ಮಧ್ಯಾಹ್ನ 12ಕ್ಕೆ ಗುಂಡಿಯಿಂದ ಹೊರ ತೆಗೆದರೆನ್ನಲಾಗಿದೆ.

ಮರಳಿಗಾಗಿ ನದಿಯ ಈ ಭಾಗದಲ್ಲಿ ಆಳವಾದ ಗುಂಡಿಗಳಿದ್ದು ಈ ಗುಂಡಿಗಳಲ್ಲಿ ಗ್ರಾಮದ ಜನ ಹಾಗೂ ದನಕರುಗಳು ಮುಳುಗಿ ಸಾವನ್ನಪ್ಪುವ ಘಟನೆಗಳು ಆಗಾಗ್ಗೆ ನಡೆಯುತ್ತಲೇ ಇವೆ. ಈ ಗುಂಡಿಗಳನ್ನು ಮುಚ್ಚಿಸಬೇಕು ತಹಶೀಲ್ದಾರ್ ಸ್ಥಳಕ್ಕೆ ಆಗಮಿಸಬೇಕೆಂದು ಮೃತರ ಬಂಧುಗಳು ನದಿ ದಡದಲ್ಲಿ ಕೆಲ ಸಮಯ ಪ್ರತಿಭಟನೆ ನಡೆಸಿದರು. ನಂತರ ಕೆಲ ಪೊಲೀಸ್ ಸಿಬ್ಬಂದಿ ಹಾಗೂ ಕಂದಾಯ ನಿರೀಕ್ಷಕ ಸಮೀರ್ ಸ್ಥಳಕ್ಕೆ ಆಗಮಿಸಿ ತಹಶೀಲ್ದಾರ್‌ರು ಊರಲ್ಲಿ ಇಲ್ಲ, ನದಿಯಲ್ಲಿರುವ ಗುಂಡಿಗಳನ್ನು ಮುಚ್ಚಿಸಲು ಶೀಘ್ರವೇ ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಡಲಾಯಿತು.


ನದಿಯಿಂದ ದೇಹಗಳನ್ನು ಹೊರತೆಗೆದಾಗ ಕುಟುಂಬಸ್ಥರ ರೋಧನ ಮುಗಿಲು ಮುಟ್ಟಿತ್ತು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ನಿವೃತ್ತ ನ್ಯಾಯಾಧೀಶ ಜೆ. ಚನ್ನವೀರಪ್ಪ ನಿಧನ



ದಾವಣಗೆರೆ ಸಿಟಿ, ಎಂಸಿಸಿ ಬಿ ಬ್ಲಾಕ್ 3ನೇ ಮೇನ್, 6ನೇ ಕ್ರಾಸ್ ವಾಸಿ ನಿವೃತ್ತ ನ್ಯಾಯಾಧೀಶರಾದ ಜೆ. ಚನ್ನವೀರಪ್ಪ (92) ಇವರು ದಿನಾಂಕ 1.11.2024ರ ಶುಕ್ರವಾರ ರಾತ್ರಿ 9.25ಕ್ಕೆ ನಿಧನರಾದರು. ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 2.11.2024ರ ಶನಿವಾರ ಬೆಳಿಗ್ಗೆ 10 ಗಂಟೆಯವರೆಗೆ ಎಂಸಿಸಿ ಬಿ ಬ್ಲಾಕ್‌ನ ಮೃತರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯು ಹೂವಿನ ಹಡಗಲಿ ತಾಲ್ಲೂಕು ಹೊಳಲು ಗ್ರಾಮದ ಮೃತರ ಜಮೀನಿನಲ್ಲಿ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ.

## ಹಳೇಬಾತಿ ಕೋಟ್ಯಾಳ್ ರೇವಣಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ಕೋಟ್ಯಾಳ್ ರೇವಣಸಿದ್ದಪ್ಪ (88) ಇವರು ದಿನಾಂಕ : 02.11.2024ರ ಶನಿವಾರ ಬೆಳಿಗ್ಗೆ 12.05 ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 02.11.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಹಳೇಬಾತಿ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ವಕ್ಫ್ ಬೋರ್ಡ್ ರದ್ದತಿಗೆ ಎಂಪಿಆರ್ ಒತ್ತಾಯ

ದಾವಣಗೆರೆ, ನ.1- ಹಿಂದೂಗಳಿಗೆ ಮಾರಕವಾಗಿರುವ ದೇಶದಲ್ಲಿನ ವಕ್ಫ್ ಬೋರ್ಡ್ ರದ್ದುಗೊಳಿಸಬೇಕೆಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಕುರಿತು ಪ್ರಧಾನಿ ಮೋದಿ ಅವರಿಗೆ ಅ.27ರಂದು ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಹಿಂದೂಗಳ ದೇವಸ್ಥಾನ ನಿರ್ಮಿಸಲು ಅಧಿಕಾರಿಗಳು ಒಂದು ಗುಂಟೆ ಜಾಗ ನೀಡುವುದಿಲ್ಲ. ಎಲ್ಲ ವರ್ಗದ ಮಠಾಧೀಶರಿಗೆ ಭೂಮಿ ನೀಡಲು ಅವಕಾಶ ಇಲ್ಲ. ಆದರೆ, ವಕ್ಫ್ ಬೋರ್ಡ್‌ಗೆ ಬೇಕಾ ಬಿಟ್ಟಿ ಭೂಮಿ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಸಚಿವ ಜಮೀರ್ ಅಹಮ್ಮದ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿ ರೈತರ ಫಲವತ್ತಾದ ಕೃಷಿ ಭೂಮಿ, ಹಿಂದೂಗಳ ಸ್ಮಶಾನ, ಮಠಗಳು ಹಾಗೂ ದೇವಸ್ಥಾನಗಳ ಆಸ್ತಿ ಕಬಳಿಸುವ ಜತೆಗೆ ನೋಟಿಸ್ ನೀಡುತ್ತಿದ್ದಾರೆ. ರಾಜ್ಯದಲ್ಲಿ ಅಂದಾಜು 1 ಲಕ್ಷಕ್ಕೂ ಹೆಚ್ಚು ಭೂಮಿ ವಕ್ಫ್ ಬೋರ್ಡ್ ಕಬಳಿಸಿದೆ ಎಂದು ದೂರಿದರು.

ರಾಜ್ಯದಲ್ಲಿ ಶಾಲಾ-ಕಾಲೇಜು, ಸರ್ಕಾರಿ ಕಚೇರಿ, ದೇವಸ್ಥಾನ, ಮಠಗಳಿಗೆ ಹಾಗೂ ಬಡವರು ಮನೆಗಳ ನಿರ್ಮಾಣ ಮಾಡಲು ಜಾಗ ಇಲ್ಲ. ಆದರೆ, ವಕ್ಫ್ ಬೋರ್ಡ್‌ಗೆ ಅಧಿಕಾರಿಗಳು ಹೇಗೆ ಭೂಮಿ ಮಂಜೂರು ಮಾಡುತ್ತಿದ್ದಾರೆ? ಎಂದು ಅವರು ಪ್ರಶ್ನಿಸಿದರು.

ಸಚಿವ ಜಮೀರ್ ಅಹಮ್ಮದ್ ಕರ್ನಾಟಕವನ್ನು ಪಾಕಿಸ್ತಾನ ಮಾಡಲು ಹೊರಟಿದ್ದಾರೆ. ಇದು ಎಂದಿಗೂ ನಡೆಯುವುದಿಲ್ಲ ಎಂದವರು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಹಿಳೆಯರು ಹಣ ಕೊಟ್ಟು ಬಸ್ ಟಿಕೆಟ್ ಖರೀದಿಸಲು ರೆಡಿ ಇದ್ದಾರೆ ಎಂದಿದ್ದು, ಈ ಬಗ್ಗೆ ಯಾರು ಪತ್ರ ಬರೆದಿದ್ದಾರೆ, ಮೇಲ್ ಕಳಿಸಿದ್ದಾರೆ ಎಂಬುದನ್ನು ಬಿಡುಗಡೆ ಮಾಡಲಿ ಎಂದು ಒತ್ತಾಯಿಸಿದರು.





ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾದ 69ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಆಕರ್ಷಕ ನೃತ್ಯ ಪ್ರದರ್ಶನ (ಮೊದಲ ಚಿತ್ರ), ವಿದ್ಯಾರ್ಥಿಗಳಿಂದ ಹುಲಿ ವೇಷ ನೃತ್ಯ ಪ್ರದರ್ಶನ ನಡೆಯಿತು. (ಮಧ್ಯದ ಚಿತ್ರ), ವಿದ್ಯಾರ್ಥಿಗಳಿಂದ ಚಿತ್ರದ ಹಾಡಿಗೆ ಸಾಮೂಹಿಕ ನೃತ್ಯ ಪ್ರದರ್ಶನ (ಕೊನೆ ಚಿತ್ರ)

# ಸಾಧನೆಯಲ್ಲಿ ರಾಜ್ಯಕ್ಕೆ ಅಂತರರಾಷ್ಟ್ರೀಯ ಮನ್ನಣೆ : ಸಚಿವ ಎಸ್ಸೆಸ್ಸೆಂ



ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ, ಪುರಸ್ಕರಿಸಲಾಯಿತು.

(1ನೇ ಪುಟದಿಂದ) 1ರಂದು ಅಂದಿನ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸು ಅವರ ಕನಸಿನ ಫಲವಾಗಿ, ಮೈಸೂರು ರಾಜ್ಯವು ಕರ್ನಾಟಕ ಎಂದು ಮರುನಾಮಕರಣ ಗೊಂಡಿತು. ನಾಮಕರಣಗೊಂಡು 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕನ್ನಡದ ಮೊಟ್ಟ ಮೊದಲ ಶಾಸನವೆಂದು ಗುರುತಿಸಲ್ಪಟ್ಟ ಹಲ್ಮಿಡಿ ಶಾಸನದ ಶಿಲಾ ಪ್ರತಿಕೃತಿಯನ್ನು ಪ್ರತಿಷ್ಠಾಪಿಸಲಾಗಿದೆ ಎಂದು ಮಲ್ಲಿಕಾರ್ಜುನ್ ಹೇಳಿದರು.

15 ವಿವಿಧ ತುಕಡಿಗಳು ಶಿಸ್ತಿನ ಮತ್ತು ಆಕರ್ಷಕ ಪಥ ಸಂಚಲನದಲ್ಲಿ ಪ್ಲಟೂನ್ ಕಮಾಂಡರ್ ಜೊತೆ ಪಾಲ್ಗೊಂಡವು. ರಾಜ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 33 ಗಣ್ಯರನ್ನು ಇದೇ ಸಂದರ್ಭದಲ್ಲಿ ಸ್ಮರಣಿಕೆ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ನಗರದ ನಿಟ್ಟುವಳ್ಳಿಯ ನಿಂಚನ ಪಬ್ಲಿಕ್ ಶಾಲೆ, ನಿಜಲಿಂಗಪ್ಪ ಬಡಾವಣೆಯ ಗುರುಕುಲ ಪಬ್ಲಿಕ್ ಶಾಲೆ, ಶಾಮನೂರಿನ ಜೈನ್ ವಿದ್ಯಾಲಯ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳು ಕನ್ನಡ ರಾಜ್ಯೋತ್ಸವದ ಕನ್ನಡ ಹಾಡುಗಳಿಗೆ ನೃತ್ಯಪ್ರದರ್ಶನ ನೀಡಿದರು. ಕೊಡಗನೂರು ನಾಗರಾಜ್ ಇವರು ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು ಎಂಬ ಗೀತೆಗೆ ಹೆಜ್ಜೆ ಹಾಕಿದರು.

ಇದಕ್ಕೂ ಮುಂಚೆ ರಾಜ್ಯೋತ್ಸವದ ಅಂಗವಾಗಿ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು, ಕನ್ನಡ ತಾಯಿ ಭುವನೇಶ್ವರಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ಕಲಾ ತಂಡಗಳು ಹಾಗೂ ವಿವಿಧ ಸ್ತಬ್ಧ ಚಿತ್ರಗಳೊಂದಿಗೆ ಜಿಲ್ಲಾ ಕ್ರೀಡಾಂಗಣದವರೆಗೆ ಸಾಗಿತು.

ಕನ್ನಡದ ಮೊಟ್ಟ ಮೊದಲ ಹಲ್ಮಿಡಿ ಶಾಸನದ ಶಿಲಾ ಪ್ರತಿಕೃತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಷ್ಠಾಪಿಸಲಾಯಿತು. ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರು ಪ್ರತಿಷ್ಠಾಪನೆ ನೆರವೇರಿಸಿದರು.

ಜಿಲ್ಲಾ ಕ್ರೀಡಾಂಗಣದ ಸಮಾರಂಭದಲ್ಲಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಶಾಸಕ ಕೆ.ಎಸ್. ಬಸವಂತಪ್ಪ, ಮೇಯರ್ ಕೆ.ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಉಪ ಮೇಯರ್ ಸೋಗಿ ಶಾಂತಕುಮಾರ್, ಜಿಲ್ಲಾಧಿಕಾರಿ ಜಿ. ಎಂ.ಗಂಗಾಧರಸ್ವಾಮಿ, ಜಿ.ಪಂ ಸಿಇಒ ಸುರೇಶ್ ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್ ಮತ್ತಿತರರು ಭಾಗವಹಿಸಿದ್ದರು.

## ತಂಡಗಳಿಗೆ ಬಹುಮಾನ

ಪಥಸಂಚಲನ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಡಿಎಆರ್.ತಂಡ ಪಡೆಯಿತು. ದ್ವಿತೀಯ ಗೃಹ ರಕ್ಷಕ ದಳ ತಂಡ, ತೃತೀಯ ನಗರ ಉಪವಿಭಾಗ ಪೊಲೀಸ್ ತಂಡ ಪಡೆದವು.

ಎನ್.ಸಿ.ಸಿ ತಂಡದ ವಿಭಾಗದಿಂದ ಪ್ರಥಮ ಎ.ಆರ್.ಜಿ. ಕಾಲೇಜು ತಂಡ, ದ್ವಿತೀಯ ಜಿ.ಎಫ್.ಜಿ.ಸಿ. ಕಾಲೇಜು, ತೃತೀಯ ಎ.ವಿ.ಕೆ ಕಾಲೇಜು ತಂಡ ಬಹುಮಾನ ಪಡೆದವು.

ಹೈಸ್ಕೂಲ್ ತಂಡಗಳ ವಿಭಾಗದಲ್ಲಿ ಪ್ರಥಮ ಭಾರತ ಸೇವಾದಳ ತಂಡ, ದ್ವಿತೀಯ ಸೆಂಟ್ ಜಾನ್ಸ್ ಹೈಸ್ಕೂಲ್ ಗರ್ಲ್ಸ್, ತೃತೀಯ ಸರ್ಕಾರಿ ಬಾಲಕರ ಹೈಸ್ಕೂಲ್ ತಂಡ ಬಹುಮಾನ ಪಡೆದವು.

ಪ್ರೈಮರಿ ತಂಡಗಳ ವಿಭಾಗದಲ್ಲಿ ಸಿದ್ದಗಂಗಾ ಪ್ರಾಥಮಿಕ ಶಾಲೆ ಬಹುಮಾನ ಪಡೆಯಿತು. ವಿಶೇಷ ವಿಭಾಗದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ತಂಡ ಮತ್ತು ಜಿಲ್ಲಾ ಪೊಲೀಸ್ ವಾದ್ಯವೃಂದ ತಂಡಗಳು ಬಹುಮಾನ ಪಡೆದವು.

ಸಾಂಸ್ಕೃತಿಕ ನೃತ್ಯ ವಿಭಾಗದಲ್ಲಿ ನಿಜಲಿಂಗಪ್ಪ ಬಡಾವಣೆಯ ಗುರುಕುಲ ಪಬ್ಲಿಕ್ ಶಾಲೆ ಪ್ರಥಮ ಬಹುಮಾನ ಪಡೆಯಿತು. ಶಾಮನೂರು ಜೈನ್ ವಿದ್ಯಾಲಯ ಸಿಬಿಎಸ್‌ಇ ಶಾಲೆ ದ್ವಿತೀಯ ಹಾಗೂ ನಗರದ ನಿಟ್ಟುವಳ್ಳಿಯ ನಿಂಚನ ಪಬ್ಲಿಕ್ ಶಾಲೆ ತೃತೀಯ ಬಹುಮಾನ ಪಡೆದವು.

## ಗುಜರಾತ್‌ನ ಅತಿ ದೊಡ್ಡ ತ್ಯಾಜ್ಯ ವಿದ್ಯುತ್ ಘಟಕಕ್ಕೆ ಚಾಲನೆ

ಅಹಮದಾಬಾದ್, ನ. 1 - ಘನ ತ್ಯಾಜ್ಯದಿಂದ 15 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಚಾಲನೆ ನೀಡಿದ್ದಾರೆ.

ಗುಜರಾತ್‌ನ ಅಹಮದಾಬಾದ್ ನಗರದ ಹೊರ ವಲಯದಲ್ಲಿರುವ ಪಿಪ್ಲಜ್ ಎಂಬ ಹಳ್ಳಿಯ ಬಳಿ 375 ಕೋಟಿ ರೂ. ವೆಚ್ಚದ ಈ ಘಟಕ ಸ್ಥಾಪಿಸಲಾಗಿದೆ. ಇದು ಗುಜರಾತ್‌ನಲ್ಲೇ ಅತಿ ದೊಡ್ಡ ತ್ಯಾಜ್ಯ ಆಧರಿತ ವಿದ್ಯುತ್ ಘಟಕವಾಗಿದೆ.

ಪ್ರತಿದಿನ ನಗರದಲ್ಲಿ ಉತ್ಪಾದನೆಯಾಗುವ ಸಾವಿರ ಮೆಟ್ರಿಕ್ ಟನ್ ಘನತ್ಯಾಜ್ಯ ಬಳಸಿ ವಿದ್ಯುತ್ ಉತ್ಪಾದಿಸಲಾಗುವುದು.

## ಚಿನ್ನಾಭರಣ ಕಳ್ಳತನ : ಮಹಿಳೆಯರ ಬಂಧನ

ಹರಿಹರ, ನ.1- ನಗರದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರು ಮಹಿಳೆಯರನ್ನು ಇಲ್ಲಿನ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಲಬುರ್ಗಿ ನಿವಾಸಿಗಳಾದ ಸುನೀತಾ ಕೋಂ ಸಖಾ (48), ರಾತಿಯಾ ಉಪಾಧ್ಯ ಕೋಂ ಕೃಷ್ಣ ಉಪಾಧ್ಯ (40) ಬಂಧಿತ ಆರೋಪಿಗಳು.

**ವಿವರ:** ಕುಮಾರಪಟ್ಟಣಂ ನಿವಾಸಿ ಪಿ.ಎಂ. ಪವಿತ್ರ ಅವರು ಕಳೆದ ಫೆ. 13 ರಂದು ತಮ್ಮ ತವರೂರಾದ ನಾಗಸಮುದ್ರಕ್ಕೆ ತೆರಳಲೆಂದು ನಗರದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ತಮ್ಮ ಕೊರಳಲ್ಲಿದ್ದ 35 ಗ್ರಾಂ ಬಂಗಾ ರದ ಮಾಂಗಲ್ಯ ಚೈನ್ ಯಾರೋ ಕಳ್ಳತನ ಮಾಡಿ ಕೊಂಡು ಹೋಗಿದ್ದಾರೆಂದು ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪೊಲೀಸರು ಬಸ್ ನಿಲ್ದಾಣದಲ್ಲಿ ಗಸ್ತಿನಲ್ಲಿದ್ದಾಗ, ಪುನಃ ಕಳ್ಳತನ ಮಾಡಲು ಬಂದಿದ್ದ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ ಶಿಕಾರಿಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಯ 30 ಗ್ರಾಂ ಚಿನ್ನದ ಚೈನ್ ಕಳವು ಪ್ರಕರಣದಲ್ಲೂ ಭಾಗಿಯಾಗಿರುವುದು ತಿಳಿದು ಬಂದಿದೆ. ಒಟ್ಟು 65 ಗ್ರಾಂ ಚಿನ್ನದ ಎರಡು ಸರಗಳನ್ನು ವಶಪಡಿಸಿಕೊಂಡು, ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು.

ಕಾರ್ಯಾಚರಣೆ ನಡೆಸಿದ ನಗರ ಠಾಣೆ ಇನ್ಸ್‌ಪೆಕ್ಟರ್ ಎಸ್.ದೇವಾನಂದ್, ಪಿಎಸ್ಐಗ ಳಾದ ಶ್ರೀಪತಿ ಗಿನ್ನಿ, ವಿಜಯ್.ಜಿ.ಎಸ್, ಸಿಬ್ಬಂದಿಗಳಾದ ನಾಗರಾಜ ಸುಣಗಾರ, ರವಿ.ಆರ್, ಸಿದ್ದೇಶ್.ಹೆಚ್, ರವಿನಾಯ್ಕ್. ರುದ್ರಸ್ವಾಮಿ ಕೆ.ಸಿ., ಹನುಮಂತ ಗೋಪನಾಳ, ರವಿ.ಕೆ, ಸಿದ್ದರಾಜು ಎಸ್. ಬಿ., ಪ್ರೇಮಾ, ಕರಿಯಪ್ಪ, ರೇಣುಕ, ಕವಿತಾ, ಕಾಳಮ್ಮ ಇವರನ್ನು ಎಸ್ಪಿ ಉಮಾ ಪ್ರಶಾಂತ್ ಪ್ರಶಂಸಿಸಿಷದ್ದಾರೆ.

## 'ಜಮ್ಮುವಿನ ದನಿ' ರಾಣಾ ನಿಧನ

ಜಮ್ಮು, ನ. 1 – ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ಶಾಸಕ ದೇವೇಂದ್ರ ಸಿಂಗ್ ರಾಣಾ ನಿಧನ ರಾಗಿದ್ದು, ಶುಕ್ರವಾರ ಪೂರ್ಣ ಗೌರವಗಳೊಂದಿಗೆ ಜಮ್ಮುವಿನಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. 'ಜಮ್ಮುವಿನ ದನಿ' ಎಂದೇ ಹೆಸರಾಗಿದ್ದ ರಾಣಾ ಅವರ ಅಂತ್ಯಕ್ರಿಯೆಯನ್ನು ಶಾಸ್ತ್ರಿನಗರ ಚಿತಾಗಾರದಲ್ಲಿ ನೆರವೇರಿಸಲಾಯಿತು. ಅಂತ್ಯಕ್ರಿಯೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ, ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಮತ್ತಿತರರು ಉಪಸ್ಥಿತರಿದ್ದರು. 59 ವರ್ಷದ ರಾಣಾ ಅವರು ಅಲ್ಪಕಾಲದಿಂದ ಅಸ್ವಸ್ಥತೆಯಿಂದ ಬಳಲುತ್ತಿದ್ದರು. ನಂತರ ಅವರನ್ನು ಫರೀದಾಬಾದ್‌ನಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು.

## ಪಾಕ್ ಸ್ಫೋಟದಲ್ಲಿ ಆರು ಮಕ್ಕಳು ಸೇರಿ 9 ಜನರ ಸಾವು

ಇಸ್ಲಾಮಾಬಾದ್, ನ. 1 - ಪಾಕಿಸ್ತಾನದ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ರಿಮೋಟ್ ಮೂಲಕ ನಡೆಸಲಾದ ಸ್ಫೋಟದಲ್ಲಿ ಆರು ಶಾಲಾ ಮಕ್ಕಳು ಹಾಗೂ ಓರ್ವ ಪೊಲೀಸ್ ಸೇರಿದಂತೆ ಒಂಭತ್ತು ಜನ ಸಾವನ್ನಪ್ಪಿದ್ದಾರೆ. ಪೊಲೀಸ್ ವಾಹನವನ್ನು ಗುರಿಯಾಗಿಟ್ಟುಕೊಂಡು ಈ ದಾಳಿ ನಡೆಸಲಾಗಿತ್ತು.

ಮಸ್ತುಂಗ್ ಜಿಲ್ಲೆಯಲ್ಲಿರುವ ಸಿವಿಲ್ ಹಾಸ್ಪಿಟಲ್ ಚೌಕ್‌ನಲ್ಲಿನ ಬಾಲಕಿಯರ ಹೈಸ್ಕೂಲ್ ಬಳಿ ಸ್ಫೋಟ ನಡೆಸಲಾಗಿತ್ತು.

ಸ್ಫೋಟದಲ್ಲಿ ಒಂಭತ್ತು ಜನ ಸಾವನ್ನಪ್ಪಿದ್ದಾರೆ ಹಾಗೂ ಇತರೆ 27 ಜನ ಗಾಯಗೊಂಡಿದ್ದಾರೆ. ಪೊಲೀಸ್ ವಾಹನ ಹಾಗೂ ಶಾಲಾ ವಾಹನ ಈ ಸ್ಫೋಟಕ್ಕೆ ಸಿಲುಕಿದ್ದವು. ಹಲವು ಆಟೋ ರಿಕ್ಷಾಗಳಿಗೂ ಹಾನಿಯಾಗಿದೆ.



# ದೀಪಾವಳಿ ಮತ್ತು ಕನ್ನಡದ ದೀಪ : ಒಂದು ಚಿಂತನೆ



ದೀಪಾವಳಿ ಹಬ್ಬದಲ್ಲಿ ದೀಪಕ್ಕೇ ಪ್ರಾಮುಖ್ಯತೆ! "ಅಸತೋಮಾ ಸದ್ಗಮಯ ತಮಸೋಮಾ ಜ್ಯೋತಿರ್ಗಮಯ" ಎಂಬ ಶ್ಲೋಕವು ದೀಪವು ನಮ್ಮನ್ನು ಕತ್ತಲೆಂಬ ತಮಸ್ಸಿನಿಂದ ಬೆಳಕೆಂಬ ಜ್ಞಾನದ ಕಡೆಗೆ ಕರೆದುಕೊಂಡು ಹೋಗುತ್ತದೆ ಎಂದು ಹೇಳುತ್ತದೆ. ಕತ್ತಲು ಅಜ್ಞಾನದ ಸಂಕೇತ, ಮೃತ್ಯುವಿನ ಸಂಕೇತ, ಹೆದರಿಕೆ ಭಯದ ಸಂಕೇತ, ಆದರೆ ಬೆಳಕು ಜ್ಞಾನದ, ಆನಂದದ, ಚೈತನ್ಯದ ಸತ್ವದ ಸಂಕೇತವಾಗಿದೆ, ಅಷ್ಟೇ ಅಲ್ಲದೆ ದೀಪವು ದೀಪಾಂತರ್ಗತನಾದ ಪರಮಾತ್ಮನ ಸಂಕೇತವಾಗಿದೆ.

ನಮ್ಮ ಬದುಕು ದೀಪದಂತಿರಬೇಕು . ದೀಪವು ತನಗಿರುವಷ್ಟು ಎಣ್ಣೆಯಲ್ಲಿ ಸಂತೃಪ್ತವಾಗಿ ಉರಿಯುತ್ತದೆ. ಹಾಗೆಯೇ ನಾವು ನಮ್ಮ ಜೀವನದಲ್ಲಿ ನಮಗಿರುವುದರಲ್ಲಿ ಸಂತೃಪ್ತಿ ಕಾಣಬೇಕು ಎಂದು ತೋರಿಸುತ್ತದೆ.

ಬೇರೆ ದೀಪಗಳನ್ನು ಹಚ್ಚಲು ಯಾವಾಗಲೂ ಸಿದ್ಧವಾಗಿರುತ್ತದೆ. ಹಾಗೆಯೇ ನಾವು ನಮ್ಮಲ್ಲಿರುವ ಜ್ಞಾನ ಐಶ್ವರ್ಯ ಬೇರೆಯವರಿಗೆ ದಾನ ಮಾಡಲು ಸಿದ್ಧರಾಗಿರಬೇಕು. ಜ್ಞಾನವಂತೂ ಕೊಟ್ಟಷ್ಟು ಹೆಚ್ಚುತ್ತದೆ. ಒಂದು ದೀಪ ಸಾವಿರ ದೀಪಗಳನ್ನು ಹಚ್ಚಿದರೂ, ಅದರ ಚೈತನ್ಯ ಕಡಿಮೆಯಾಗುವುದಿಲ್ಲ. ಹಾಗೆಯೇ ನಮ್ಮಲ್ಲಿರುವ ಜ್ಞಾನವನ್ನು ನಾವು ಹಂಚಿದರೆ ನಮ್ಮ ನಂತರವೂ ಆ ಜ್ಞಾನ ಉಳಿಯುತ್ತದೆ, ಬೆಳೆಯುತ್ತದೆ, ಚಿರಾಯುವಾಗುತ್ತದೆ.

ದೀಪವು ಎಂದೂ ಬೇರೆ ದೀಪಗಳನ್ನು ನೋಡಿ ಹೊಟ್ಟೆಕಿಚ್ಚು ಪಡುವುದಿಲ್ಲ, ತನ್ನಷ್ಟಕ್ಕೆ ತಾನು ತನ್ನೊಳಗೆ ಆನಂದದಲ್ಲಿ ತೇಲುತ್ತದೆ. ಆ ಆನಂದವನ್ನು ನೋಡುವವರ ಕಣ್ಣುಗಳಿಂದ ಅವರ ಅಂತರಂಗಕ್ಕೂ ನೀಡುತ್ತದೆ. ಹಾಗೆಯೇ ನಾವು ನಮ್ಮೊಳಗೆ ನಾವು ನೋಡಿಕೊಂಡು ಸಂತೋಷಪಡುವಾಗ ಆ ಸಂತೋಷ ನಮ್ಮ ಸುತ್ತಮುತ್ತಲಿನವರಿಗೂ ಹರಡುತ್ತದೆ. ಹೊಸದಾಗಿ ಅರಳಿ ನಗುತ್ತಿರುವ ಹೂವು ಆನಂದ ನೀಡುವಂತೆ, ದೀಪವು ಕೂಡ ತನ್ನ ಪ್ರಕಾಶ ದಿಂದ ತನ್ನ ಕಿರಣಗಳಿಂದ ಆಹ್ಲಾದ ನೀಡುತ್ತದೆ.

ದೀಪವು ನಮ್ಮ ಆತ್ಮದ ಸಂಕೇತವಾಗಿರುತ್ತದೆ, ಹಣತೆಯ ನಮ್ಮ ದೇಹದ ಸಂಕೇತವಾಗಿರುತ್ತದೆ. ಬರಿಯ ಹಣತೆಗೆ ಯಾವ ಬೆಲೆಯೂ ಇಲ್ಲ. ಅಲ್ಲಿ ದೀಪ ಉರಿಯುತ್ತಿದ್ದಾಗ ಹಣತೆಗೆ ದಿವ್ಯತೆ ಗೌರವ ಎಲ್ಲ ಸಿಗುತ್ತದೆ. ಅದು ದೀಪಲಕ್ಷ್ಮಿ ಎಂದು ಪೂಜೆಗೊಳ್ಳುತ್ತದೆ, ಜ್ಯೋತಿರ್ಭಿಮೇಶ್ವರ ಎಂದು ಕರೆಸಿಕೊಳ್ಳುತ್ತದೆ. ಪರಂಜ್ಯೋತಿ ಸ್ವರೂಪನಾದ ಪರಮಾತ್ಮನ ಒಂದು ಬಿಂದುವಿನಂತೆ ದೀಪವು ಪ್ರಜ್ವಲಿಸುತ್ತದೆ.

ದೀಪವು ಬೆಂಕಿಯಂತೆ ಸುಡುವುದಿಲ್ಲ. ದೀಪವು ಸಣ್ಣದಾಗಿ ಉರಿದರೆ ಹೆಚ್ಚು ಹೊತ್ತು ಉರಿಯುತ್ತದೆ. ತುಂಬ ದೊಡ್ಡದಾದರೆ ಬೇಗ ಉರಿದು ಹೋಗುತ್ತದೆ ಮತ್ತು ತನ್ನ ಸುತ್ತಮುತ್ತಲು ಶಾಖವನ್ನು ನೀಡುತ್ತದೆ. ನಮ್ಮ ಜೀವನದಲ್ಲೂ ನಾವು ಹಿತಮಿತವಾಗಿ ಜೀವನವನ್ನು ನಡೆಸಿದಾಗ ನಮಗೂ ನಮ್ಮ ಸುತ್ತಲಿರುವವರಿಗೂ ಆನಂದ ಸಂತೋಷ ನೀಡುತ್ತೇವೆ. ಅತೀ ಆಡಂಬರದ ಜೀವನ ಅನ್ಯರಿಗೆ ಅಸಹ್ಯವಾಗುತ್ತದೆ. ಇದನ್ನು ನಮಗೆ ದೀಪವೂ ತೋರಿಸುತ್ತದೆ.

ತನ್ನ ಪ್ರಜೆಗಳನ್ನು ನೋಡಲು ಬರುವ ಬಲಿಚಕ್ರವರ್ತಿಗಾಗಿ ಹಚ್ಚುವ ಸಾಲು ಸಾಲು ದೀಪಗಳು ಪಟಾಕಿಗಳು ಕತ್ತಲನ್ನು ಓಡಿಸಿ, ಸುಂದರ ಸ್ವರ್ಗದಂತಹ ವಾತಾವರಣವನ್ನು ನಿರ್ಮಾಣ ಮಾಡುತ್ತವೆ.

ಈ ವರ್ಷ ದೀಪಾವಳಿಯ ಜೊತೆಗೆ ಕನ್ನಡದ ದೀಪ ಹಚ್ಚುವ ಸುಂದರ ಅವಕಾಶ ನಮ್ಮದಾಗಿದೆ." ಹಚ್ಚೇವು ಕನ್ನಡದ ದೀಪ" ಎಂದು ಕವಿಗಳು ಹಾಡಿದ್ದಾರೆ.

ಕನ್ನಡ ಕೇವಲ ಒಂದು ಭಾಷೆಯಾಗಿರದೆ ನಮ್ಮ ಅಂತರಂಗದ ಧ್ವನಿಯಾಗಿದೆ. ಈ ಕನ್ನಡದ ದೀಪ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರದೆ ವಿಶ್ವದಾದ್ಯಂತ ತನ್ನ ಬೆಳಕನ್ನು ಹರಡುತ್ತಿದೆ. ವಿಶ್ವದ ಮೂಲೆ ಮೂಲೆಗಳಲ್ಲಿರುವ ಕನ್ನಡದ ಮಕ್ಕಳು ಕನ್ನಡಮ್ಮನನ್ನು ನೆನೆಯುತ್ತಿದ್ದಾರೆ ಕನ್ನಡದ ದೀಪವನ್ನು ಹಚ್ಚುತ್ತಿದ್ದಾರೆ.

ಇಂತಹ ಕನ್ನಡದ ದೀಪ ಕೇವಲ ಒಂದು ದಿನ ಉರಿದರೆ ಸಾಕೆ? ಖಂಡಿತ ಇಲ್ಲ. ಈ ದೀಪವು ಪ್ರತಿದಿನವೂ ನಮ್ಮ ಮನೆಯಲ್ಲಿ ಉರಿಯಬೇಕು, ನಮ್ಮ ಮಕ್ಕಳ ಅಂತರಂಗಗಳನ್ನು ಬೆಳಗಿಸಬೇಕು, ಬರುವ ಮುಂದಿನ ಪೀಳಿಗೆಗಳಲ್ಲೂ ಕನ್ನಡದ ಪ್ರೇಮ, ಕನ್ನಡದ ಸೇವೆ ನಡೆಯಬೇಕು.

ಹೀಗಾಗಬೇಕಾದರೆ ನಾವು ದಿಟ್ಟ ಹೆಜ್ಜೆ ಇಟ್ಟು, ಕನ್ನಡವನ್ನು ಉಳಿಸಿ ಬೆಳೆಸುವ ಪಣತೊಡಬೇಕಾಗಿದೆ. ಕನ್ನಡಮ್ಮನ ದೀಪದ ಮುಂದೆ, ಕನ್ನಡಾಂಬೆಯ ಸೇವೆಯ ಪಣವನ್ನು ತೊಡೋಣ.

ದೀಪದಲ್ಲಿ ಅನೇಕ ದೇವತೆಗಳ ಸನ್ನಿಧಾನವಿದೆ. ಪಾತ್ರೆಯೊಳಗೆ ಬ್ರಹ್ಮದೇವನ ದಾದರೆ , ಎಣ್ಣೆ ಅಥವಾ ತುಪ್ಪದೊಳಗೆ ಲಕ್ಷ್ಮಿ ದೇವಿಯ ಸನ್ನಿಧಾನ. ಬತ್ತಿ ಒಳಗೆ ಹನಮಂತನ ಸನ್ನಿಧಾನ,ದೀಪದೊಳಗೆ ವಾಸುದೇವ ರೂಪಿ ಪರಮಾತ್ಮನ ಸನ್ನಿಧಾನ. ದೀಪದ ಸುತ್ತಲಿನ ಕಪ್ಪು ಬಣ್ಣದ ಒಳಗೆ ಪರಶಿವನ ಸನ್ನಿಧಾನ.

ಹಾಗೆ ನಮ್ಮ ಕನ್ನಡಮ್ಮನ ದೀಪದೊಳಗೆ, ಪಾತ್ರೆಯೇ ಕನ್ನಡ ಮಾತನಾಡುವವರ ಹೃದಯ, ಎಣ್ಣೆಯೇ ಅವರು ಬಳಸುವಂತಹ ಕನ್ನಡ ನುಡಿ, ಬತ್ತಿ ಅವರು ಮಾಡುವ ಕನ್ನಡದ ಸೇವೆ, ಅದರ ಜ್ಯೋತಿ ಕನ್ನಡ ಮಕ್ಕಳಲ್ಲಿ ತುಂಬುವ ಕನ್ನಡ ಪ್ರೇಮ.

ಇಂತಹ ದೀಪಾವಳಿಯ ಭಕ್ತಿ ತುಂಬಿದ ದೀಪವನ್ನು ಪರಮಾತ್ಮನಿಗೆ ಹಚ್ಚಿ, ಕನ್ನಡಾಂಬೆಗೆ ಕನ್ನಡದ ದೀಪವನ್ನು ಹಚ್ಚೋಣ. ಸನ್ಮಂಗಳವನ್ನು ಮಾಡೆಂದು ಪ್ರಾರ್ಥಿಸೋಣ. ಅಂತರಂಗದಲ್ಲಿ ಆನಂದದ ಅನುಭೂತಿಯನ್ನು ಅನುಭವಿಸೋಣ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

# ವಕ್ಫ್ ಆರೋಪ ಬಿಜೆಪಿಯ ಸೃಷ್ಟಿ

## ರೈತರಿಗೆ ಯಾವುದೇ ಸಮಸ್ಯೆಯಾಗವುದಿಲ್ಲ : ಎಸ್ಸೆಸ್ಸೆಂ

ದಾವಣಗೆರೆ, ನ. 1 - ಅತಿವೃಷ್ಟಿಯಿಂದ ಆಗಿರುವ ಹಾನಿಯ ಬಗ್ಗೆ ಸೋಮವಾರ ವಿವರಗಳನ್ನು ಅಂತಿಮಗೊಳಿಸಿ, ಪರಿಹಾರಕ್ಕಾಗಿ ಪ್ರಸ್ತಾವನೆ ಕಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅತಿವೃಷ್ಟಿಯಿಂದ 1.42 ಕೋಟಿ ರೂ. ನಷ್ಟವಾಗಿದೆ ಎಂದು ಇದುವರೆಗೂ ಅಂದಾಜಿಸಲಾಗಿದೆ ಎಂದರು.

ಕೃಷಿ ಇಲಾಖೆ ಹಾಗೂ ಇತರೆ ಇಲಾಖೆಗಳು ಜೊತೆಗೂಡಿ ಅತಿವೃಷ್ಟಿ ಹಾನಿಯ ವರದಿ ರೂಪಿಸುತ್ತಿವೆ ಎಂದೂ ಅವರು ಹೇಳಿದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಜಗಳೂರಿಗೆ ಭೇಟಿ ನೀಡಿ ಹಾನಿಯ ಪರಿಶೀಲನೆ ನಡೆಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಅತಿವೃಷ್ಟಿ ಹಾನಿಯ ವಿವರಗಳನ್ನು ಪಡೆದಿದ್ದಾರೆ ಎಂದು ಮಲ್ಲಿಕಾರ್ಜುನ್ ತಿಳಿಸಿದರು.

ದಾವಣಗೆರೆಯಲ್ಲಿ 70 ಎಕರೆ ಜಾಗ ವಕ್ಫ್ ಪಡೆದಿದೆ ಎಂಬ ಬಿಜೆಪಿ ಆರೋಪವನ್ನು ತಳ್ಳಿ ಹಾಕಿದ ಸಚಿವರು, ಇದೆಲ್ಲವೂ ಬಿಜೆಪಿಯ ಸೃಷ್ಟಿ. ಯಾವುದೇ ರೈತರಿಗೆ ಸಮಸ್ಯೆಯಾಗುವುದಿಲ್ಲ. ಈ ಬಗ್ಗೆ ಯಾವುದೇ ಅನುಮಾನ ಬೇಡ ಎಂದರು.

ಮಹಜೇನಹಳ್ಳಿಯ ಒಂದು ಪ್ರಕರಣ ಈಗ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿದೆ. ಈ ಬಗ್ಗೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಸ್ಪಷ್ಟಪಡಿಸಿದರು.

ಬಿಜೆಪಿ ಸರ್ಕಾರ ಇದ್ದ ಸಂದರ್ಭದಲ್ಲಿ ಕೊರೊನಾ ಅವಧಿಯಲ್ಲಿ ದಾವಣಗೆರೆಯಲ್ಲಿ ಸಾಕಷ್ಟು ಹಗರಣವಾಗಿದೆ. ಈ ಬಗ್ಗೆ ರಾಜ್ಯ ಮಟ್ಟದಲ್ಲಿ ಈಗಾಗಲೇ ತನಿಖೆ ನಡೆಯುತ್ತಿದೆ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಮಳೆಯಿಂದಾಗಿ ಗ್ರಾಮಾಂತರ ಭಾಗ ಹಾಗೂ ಪಿಡಬ್ಲ್ಯೂಡಿಗೆ ಸೇರಿದ ರಸ್ತೆಗಳು ಹಾಳಾಗಿವೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದಾಗ ಪ್ರಸ್ತಾವನೆ ಸಲ್ಲಿಸಿದ್ದೇವೆ. ದಾವಣಗೆರೆ ಅಭಿವೃದ್ಧಿ ಬಗ್ಗೆ ಮನವಿ ಸಲ್ಲಿಸಲಾಗಿದೆ ಎಂದು ಮಲ್ಲಿಕಾರ್ಜುನ್ ಹೇಳಿದರು.

ದಾವಣಗೆರೆ ರಾಜಕಾಲುವೆಗಳನ್ನು ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ. ಹೀಗಾಗಿ ಹೆಚ್ಚು ಮಳೆಯಾದರೂ ಎಲ್ಲಿಯೂ ಸಮಸ್ಯೆಯಾಗಿಲ್ಲ. ಬಸಾಪುರದ ಮುಖ್ಯ ರಾಜಕಾಲುವೆಯನ್ನು ಕೊಳಚೆ ಸಂಸ್ಕರಣಾ ಘಟಕದವರೆಗೂ ವಿಸ್ತರಿಸಲು ಪ್ರಸ್ತಾವನೆ ರೂಪಿಸಲಾಗಿದೆ. ಇದು ಜಾರಿಗೆ ಬಂದಲ್ಲಿ ಇನ್ನಷ್ಟು ಅನುಕೂಲವಾಗಲಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯುತ್ತಿದೆ. ಈ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ತಮಗೆ ಶಿಗ್ಗಾಂವ್ ಕ್ಷೇತ್ರದ ಉಸ್ತುವಾರಿ ನೀಡಲಾಗಿದೆ ಎಂದು ಸಚಿವರು ಹೇಳಿದರು.

# ಸಾರ್ವಜನಿಕ ರುದ್ರಭೂಮಿ ಸ್ವಚ್ಛತಾ ಕಾರ್ಯಕ್ರಮ



ದಾವಣಗೆರೆ, ನ.1- ದೀಪಾವಳಿ ಹಬ್ಬದ ಅಂಗವಾಗಿ ಹಿರಿಯರ ಹಬ್ಬದ ಪ್ರಯುಕ್ತ ಮಹಾನಗರ ಪಾಲಿಕೆಯಿಂದ ಗುರುವಾರ ಬೆಳಗ್ಗೆ ನಗರದಲ್ಲಿನ ರುದ್ರ ಭೂಮಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ವೇಳೆ ಪಾಲಿಕೆ ಆಯುಕ್ತೆ ರೇಣುಕಾ, ಮೇಯರ್ ಕೆ. ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರಾದ ಜಿ. ಎಸ್. ಮಂಜುನಾಥ್ ಗಡಿಗುಡಾಳ್, ಎಲ್.ಡಿ ಗೋಣೆಪ್ಪ, ಉದಯ್ ಕುಮಾರ್, ಉಮೇಶ್, ಪಾಲಿಕೆ ಅಧಿಕಾರಿಗಳು ಮತ್ತಿತರರಿದ್ದರು.

# ನಮ್ಮ ಹೆಮ್ಮೆಯ ಕನ್ನಡ

ಅಕ್ಕರೆ ತುಂಬಿದ ಸಕ್ಕರೆಯಂತಹ
ಆಕರ್ಷಕ ನುಡಿ ಕನ್ನಡವು
ಮನಸಿಗೆ ತಂಪನು ಕಿವಿಗಳಿಗಿಂಪನು
ನೀಡುವ ಭಾಷೆಯು ಸುಂದರವು.

ಹೇಗೆ ಬಣ್ಣಿಸಲಿ ಹೇಗೆ ಹೊಗಳಲಿ
ನಮ್ಮಯ ಕರುನಾಡಿನ ಹಿರಿಮೆ?
ನಾ ಕನ್ನಡಿಗ ನಾ ಕನ್ನಡತಿ
ಎಂದು ನುಡಿಯಲು ಬಲು ಹೆಮ್ಮೆ.

ಕವಿ ಪುಂಗವರ ವಚನಕಾರರ
ದಾಸ ವರೇಣ್ಯರ ನೆಲೆವೀಡು
ವಾಸ್ತು ಶಿಲ್ಪ, ಸಂಗೀತ ಕಲೆಗಳ
ಆಗರವಾಗಿಹ ಕರುನಾಡು.

ಎಂಟು ಜ್ಞಾನಪೀಠವನು ಪಡೆದಿಹ
ಹಿರಿಮೆಯು ಕನ್ನಡ ಭಾಷೆಯದು
ಕರುನಾಡಿನ ಈ ನೆಲದಲಿ ಜನಿಸಿದ
ಪುಣ್ಯವಿದೋ ನಮ್ಮೆಲ್ಲರದು.

ಕುವೆಂಪು, ಬೇಂದ್ರೆ,ಕಾರಂತ, ಮಾಸ್ತಿ
ಕನ್ನಡ ನಾಡಿಗೆ ಇವರೇ ಆಸ್ತಿ
ಗೋಕಾಕ, ಕಾರ್ನಾಡ, ಅನಂತ ಮೂರ್ತಿ
ಕಂಬಾರರಿಂದಲೇ ಕನ್ನಡದ ಕೀರ್ತಿ.

ಭಾಷೆಗಳಲ್ಲೇ ಸುಮಧುರ ಭಾಷೆ
ಅದುವೇ ಕನ್ನಡ ಕಸ್ತೂರಿ
ಎಂದುಲಿವೆವು ಅಭಿಮಾನದಿಂದಲಿ
ನುಡಿಸುತ ಬಣ್ಣದ ತುತ್ತೂರಿ.

ಕನ್ನಡ ಏಕೀಕರಣಕೆ ಹಲವರು
ಹೋರಾಡಿದರೀ ನೆಲದಲ್ಲಿ
ನಾಡು ನುಡಿಯ ಮೇಲಿನ ಅಭಿಮಾನವ
ತೋರಿಸಿದರವರ ಹೃದಯದಲಿ.

ಕನ್ನಡಿಗರ ಹೋರಾಟದ ಫಲವು
ಆಯಿತು ಕರ್ನಾಟಕ ಏಕೀಕರಣವು
ಕನ್ನಡ ರಾಜ್ಯೋತ್ಸವದ ಹೆಸರಿನಲಿ
ಹಬ್ಬವನೆಲ್ಲರು ಆಚರಿಸುವೆವು.

ಕನ್ನಡ ನಾಡಿನ ಏಳಿಗೆಗಾಗಿ
ಒಗ್ಗಟ್ಟಿನಲಿ ಶ್ರಮಿಸೋಣ
ಕನ್ನಡ ಭಾಷೆಯ ಸುಮಧುರ ಕಂಪನು
ಎಲ್ಲೆಡೆಯಲ್ಲೂ ಹರಡೋಣ.

ಕನ್ನಡ ತಾಯಿ ಭುವನೇಶ್ವರಿಗೆ
ಭಕ್ತಿಯಿಂದ ತಲೆಬಾಗೋಣ
ಕನ್ನಡಿಗರನೆಲ್ಲ ಪೊರೆ ನೀನೆಂದು
ವಿನಯದಿ ಪ್ರಾರ್ಥನೆ ಮಾಡೋಣ.

**- ಜಿ.ಎಸ್.ಗಾಯತ್ರಿ**, ಹರಿಹರ

# ಹುಬ್ಬಳ್ಳಿ-ಯಶವಂತಪುರ ನಡುವೆ ವಿಶೇಷ ರೈಲು ಸೇವೆ

ದಾವಣಗೆರೆ, ನ.1- ದೀಪಾವಳಿಯ ನಂತರದ ಅವಧಿಯಲ್ಲಿ ಮತ್ತು ಮುಂಬರುವ ದೀರ್ಘ ವಾರಾಂತ್ಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿರ್ವಹಿಸಲು, ನೈಋತ್ಯ ರೈಲ್ವೆಯು ಹುಬ್ಬಳ್ಳಿ ಮತ್ತು ಯಶವಂತಪುರ ನಿಲ್ದಾಣಗಳ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು ಓಡಿಸಲಿದೆ.



ರೈಲು ಸಂಖ್ಯೆ 07353 / 07354 ಎಸ್‌ಎಸ್‌ಎಸ್ ಹುಬ್ಬಳ್ಳಿ - ಯಶವಂತಪುರ - ಎಸ್‌ಎಸ್‌ಎಸ್ ಹುಬ್ಬಳ್ಳಿ ವಿಶೇಷ ಎಕ್ಸ್ ಪ್ರೆಸ್ (1 ಟ್ರಿಪ್)

ರೈಲು ಸಂಖ್ಯೆ 07353 ಎಸ್‌ಎಸ್‌ಎಸ್ ಹುಬ್ಬಳ್ಳಿ-ಯಶವಂತಪುರ ವಿಶೇಷ ಎಕ್ಸ್ ಪ್ರೆಸ್ ರೈಲು ನವೆಂಬರ್ 3 ರಂದು ಎಸ್‌ಎಸ್‌ಎಸ್ ಹುಬ್ಬಳ್ಳಿಯಿಂದ ರಾತ್ರಿ 8 ಗಂಟೆಗೆ ಹೊರಟು, ನವೆಂಬರ್ 4 ರಂದು ಯಶವಂತಪುರ ನಿಲ್ದಾಣವನ್ನು ಮುಂಜಾನೆ 3:30 ಗಂಟೆಗೆ ತಲುಪಲಿದೆ.

ಪುನಃ ಇದೆ ರೈಲು (07354) ನವೆಂಬರ್ 4ರಂದು ಯಶವಂತಪುರದಿಂದ ಬೆಳಗ್ಗೆ 4.45 ಗಂಟೆಗೆ ಹೊರಟು ಅದೇ ದಿನ ಮಧ್ಯಾಹ್ನ 12.50ಕ್ಕೆ ಎಸ್‌ಎಸ್‌ಎಸ್ ಹುಬ್ಬಳ್ಳಿ ತಲುಪಲಿದೆ.

ಈ ರೈಲು ಎರಡೂ ಮಾರ್ಗಗಳಲ್ಲಿ ಹಾವೇರಿ, ರಾಣೇಬೆನ್ನೂರು, ಹರಿಹರ, ದಾವಣಗೆರೆ, ಚಿಕ್ಕಜಾಜೂರು, ಕಡೂರು, ಅರಸೀಕೆರೆ, ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಈ ರೈಲಿನಲ್ಲಿ ಒಂದು ಎಸಿ ಫಸ್ಟ್ ಕ್ಲಾಸ್, ಒಂದು ಎಸಿ ಟು ಟೈರ್, ಮೂರು ಎಸಿ ತ್ರಿ-ಟೈರ್, ಎಂಟು ಸ್ಲೀಪರ್ ಕ್ಲಾಸ್, ಐದು ಜನರಲ್ ಸೀಟಿಂಗ್ ಕೋಚ್, ಪ್ಯಾಂಟ್ರಿ ಕಾರ್ (ಲಾಕ್ಡ್ ಕಂಡೀಶನ್) ಮತ್ತು ಎರಡು ಎಸ್‌ಎಲ್‌ಆರ್/ಡಿ ಸೇರಿದಂತೆ 21 ಬೋಗಿಗಳು ಇರಲಿದೆ.

ಪ್ರತಿ ನಿಲ್ದಾಣದಲ್ಲಿನ ಆಗಮನ/ನಿರ್ಗಮನ ಸಮಯಕ್ಕಾಗಿ, ಪ್ರಯಾಣಿಕರು www.enquiry.indianrail.gov.in ಅಧಿಕೃತ ರೈಲ್ವೆ ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ, NTES ಅಪ್ಲಿಕೇಶನ್ ಬಳಸಿ ಅಥವಾ 139 ನಂಬರ್‌ಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ ಕನಮಡಿ ತಿಳಿಸಿದ್ದಾರೆ.

# ಭಾರತದಲ್ಲಿ ಆಪಲ್‌ಗೆ ದಾಖಲೆ ಆದಾಯ

ನವದೆಹಲಿ, ನ. 1 - ಐಫೋನ್ ಉತ್ಪಾದಿಸುವ ಆಪಲ್ ಕಂಪನಿಯು ಭಾರತದಲ್ಲಿ ದಾಖಲೆ ಆದಾಯ ಗಳಿಸಲಿದೆ. 2024ರ ಸೆಪ್ಟೆಂಬರ್ ಚತುರ್ಥದಲ್ಲಿ ಕಂಪನಿಯ ಐಪ್ಯಾಡ್ ಮಾರಾಟ ಎರಡಂಕಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಕಳೆದ ವರ್ಷ ಕಂಪನಿಯು ಭಾರತದಲ್ಲಿ 89.49 ಶತಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡಿತ್ತು.

ಈ ವರ್ಷ ಮಾರಾಟ ಪ್ರಮಾಣ ಶೇ.6ರಷ್ಟು ಹೆಚ್ಚಾಗಿ 94 .93 ಶತಕೋಟಿಗಳಿಗೆ ತಲುಪಿದೆ.

# ಬಲಿಪಾಡ್ಯಮಿಯ ಶುಭದಿನ ಬಂದಿದೆ

ಬಲಿಪಾಡ್ಯಮಿಯ ಶುಭದಿನ ಬಂದಿದೆ
ಬಲೀಂದ್ರನ ಪೂಜೆಯ ಮಾಡೋಣ
ಬಲಿಯಂತೆ ದಾನ ಧರ್ಮವ ಮಾಡುವ
ಬಲಿಯಂತೆ ಶರಣಾಗೋಣ

ಬೇರೆಯವರ ಸಂಪತ್ತು ಕಬಳಿಸದೆ
ಪರಮ ಸಂತೃಪ್ತಿಲಿ ಬಾಳೋಣ
ಬರಿದಾದ ಮನೆಯಾದರೂ
ಅದರೊಳಗೆ
ಪರಿಪೂರ್ಣ ಆನಂದದಿ ಬಾಳೋಣ

ವಾಮನನಾಗಿ ಬಂದು ಬೇಡಿದ ಶ್ರೀಹರಿ
ಸಮವಿಲ್ಲದ ತ್ರಿವಿಕ್ರಮ ತಾನಾದನು
ತಾಮಸ ಬುದ್ಧಿ ಮಾಡಿದರೆ ಸಹಿಸೆ
ಸ್ವಾಮಿ ತಾನೆಂಬುದ ತೋರಿದನು

ಸಾಲು ದೀಪಗಳ ಹಚ್ಚುವ ಬನ್ನಿರಿ
ಹಾಲು ಎರೆದು ಪೂಜೆ ಮಾಡುವ
ಲೀಲೆಯಿಂದ ಬರುವ ಕೃಷ್ಣ ಬಲೀಂದ್ರರ
ಮಾಲೆ ಹಾಕಿ ಆರಾಧಿಸೋಣ

ಭಕ್ತಿಗೊಲಿದು ಬಲಿಯನು ತಳ್ಳಿದನು
ಭಕ್ತನ ಮನೆಯ ಬಾಗಿಲ ಕಾಯ್ವನು
ಭಕ್ತವತ್ಸಲ ಬಾಲಗೋಪಾಲವಿಠಲನು
ಭಕ್ತ ಬಲಿಯ ಜೊತೆಯಲಿ ಬರುವನು

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

# ದೀಪಾವಳಿಗೆ ಈ ಹಳ್ಳಿಯಲ್ಲಿ ಕಲ್ಲು ತೂರಾಟದ ಪದ್ಧತಿ

## ಏಟು ಬಿದ್ದು ರಕ್ತ ಹರಿಯುವವರೆಗೂ ಕಲ್ಲು ತೂರುವ ಸಂಪ್ರದಾಯಕ್ಕಿದೆ 300 ವರ್ಷಗಳ ಇತಿಹಾಸ

ಶಿಮ್ಲಾ, ನ. 1 – ದೀಪಾವಳಿಯ ಸಂದರ್ಭದಲ್ಲಿ ಸಿಹಿ ವಿನಿಮಯ ಮಾಡಿಕೊಳ್ಳುವುದು ಸಾಮಾನ್ಯ. ಆದರೆ, ಹಿಮಾಚಲ ಪ್ರದೇಶದ ಧಾಮಿ ಹಳ್ಳಿಯಲ್ಲಿ ದೀಪಾವಳಿಯನ್ನು 'ಪತ್ಥರೋಂ ಕಾ ಮೇಲಾ' ಮೂಲಕ ಆಚರಿಸಲಾಗುತ್ತದೆ. ಈ ಸಮಾರಂಭದಲ್ಲಿ ಜನರು ಪರಸ್ಪರರ ಮೇಲೆ ಕಲ್ಲು ತೂರಾಟ ನಡೆಸುತ್ತಾರೆ!

ರಾಜಧಾನಿ ಶಿಮ್ಲಾದಿಂದ 30 ಕಿ.ಮೀ. ದೂರವಿರುವ ಈ ಹಳ್ಳಿಯಲ್ಲಿ 300 ವರ್ಷಗಳಿಂದ ಈ ಸಂಪ್ರದಾಯ ನಡೆದುಕೊಂಡು ಬರುತ್ತಿದೆ. ದೀಪಾವಳಿಯ ಮರುದಿನ ದಂದು ಹಲೋಗ್ (ರಾಜ ಕುಟುಂಬ) ಹಾಗೂ ಜಮೋಗ್ (ಗ್ರಾಮಸ್ಥರು) ಎರಡು ಗುಂಪುಗಳಾಗಿ ಪರಸ್ಪರ ಎದುರು ನಿಲ್ಲುತ್ತಾರೆ. ನಂತರ ಪರಸ್ಪರರ ಮೇಲೆ ಸಣ್ಣ ಕಲ್ಲುಗಳನ್ನು ಎಸೆಯುತ್ತಾರೆ ಎಂದು ಸ್ಥಳೀಯ ಅರ್ಚಕರು ಹೇಳಿದ್ದಾರೆ.



ಎರಡು ಗುಂಪಿನವರ ಪೈಕಿ ಯಾರಾದರೂ ಒಬ್ಬರಿಗೆ ಕಲ್ಲು ತಗುಲಿ ಗಾಯಗೊಂಡು ರಕ್ತ ಹರಿದರೆ, ಕಲ್ಲು ತೂರಾಟ ನಿಲ್ಲುತ್ತದೆ. ಗಾಯಗೊಂಡ ವ್ಯಕ್ತಿಯ ರಕ್ತವನ್ನು ಕಾಳಿ ದೇವಿ ಹಣೆಗೆ ಇರಿಸಲಾಗುತ್ತದೆ.

ಈ ವರ್ಷ ಕಲ್ಲು ತೂರಾಟದ ಉತ್ಸವ 15 ನಿಮಿಷಗಳಲ್ಲಿ ಅಂತ್ಯವಾಗಿದೆ. ಜಮೋಗ್ ಗುಂಪಿನ ಸುರಿಂದರ್ ಅವ ರಿಗೆ ಸಣ್ಣ ಗಾಯವಾಗಿ ರಕ್ತ ಸುರಿದಿತ್ತು.

ದೀಪಾವಳಿಯ ಮರು ದಿನ ಕಾಳಿ ದೇವಿ ದೇವಾಲಯದ ಅರ್ಚಕರು ಮೆರವಣಿಗೆ ನಡೆಸುತ್ತಾರೆ. ನಂತರದಲ್ಲಿ ಕಲ್ಲು ತೂರಾಟದ ಉತ್ಸವ ಆರಂಭವಾಗುತ್ತದೆ.

ವ್ಯಕ್ತಿಯೊಬ್ಬರು ಗಾಯಗೊಂಡು ರಕ್ತ ಹರಿಯುವವರೆಗೂ ಕಲ್ಲೂ ತೂರಾಟದ ಉತ್ಸವ ಮುಂದುವರೆಯುತ್ತದೆ. ನಂತರ ಗ್ರಾಮಸ್ಥರು ಗಾಯಗೊಂಡ ವ್ಯಕ್ತಿಯ ರಕ್ತವನ್ನು ಕಾಳಿ ದೇವಿಯ ಹಣೆಗೆ ಹಚ್ಚುತ್ತಾರೆ ಎಂದು ಧಾಮಿ ಸಂಸ್ಥಾನದ ಮಾಜಿ ಆಡಳಿತ ಗಾರ ಜಗದೀಪ್ ಸಿಂಗ್ ತಿಳಿಸಿದ್ದಾರೆ.

ಹಿಂದೊಂದು ಕಾಲದಲ್ಲಿ ಕಾಳಿಗೆ ನರಬಲಿ ನೀಡಲಾಗುತ್ತಿತ್ತು. ಆದರೆ, ಧಾಮಿಯ ರಾಣಿ ಈ ಸಂಪ್ರದಾಯ ಅಂತ್ಯಗೊಳಿಸಿದರು. ಪತಿಯ ಸಾವಿನ ನಂತರ ರಾಣಿ ಸತಿ ಹೋಗಲು ನಿರ್ಧರಿಸಿದ್ದರು. ಸತಿ ಹೋಗುವ ಮುನ್ನ, ನರ ಬಲಿ ನಿಲ್ಲಿಸಿ ಕಲ್ಲು ತೂರಾಟ ನಡೆಸುವ ಹೊಸ ಸಂಪ್ರದಾಯ ಆರಂಭಿಸಲು ತಿಳಿಸಿದರು ಎಂದವರು ವಿವರಿಸಿದ್ದಾರೆ.

ಉತ್ಸವದ ದಿನ ಪೂಜೆ ಸಲ್ಲಿಸಿದ ನಂತರ ರಾಜಕುಟುಂಬದವರು ಮೊದಲ ಕಲ್ಲು ಎಸೆಯುತ್ತಾರೆ ಎಂದು ಕಾಳಿ ದೇವಾಲಯದ ಅರ್ಚಕರಾದ ದೇವೇಂದ್ರ ಭಾರದ್ವಜ್ ಹೇಳಿದ್ದಾರೆ.

ಈ ಸಂಪ್ರದಾಯದಲ್ಲಿ ಕಲ್ಲೇಟಿನಿಂದ ಗಾಯಗೊಂಡ ವ್ಯಕ್ತಿಯ ರಕ್ತವನ್ನು ದೇವಿಗೆ ಅರ್ಪಿಸುವ ಕಾರಣ, ಕಲ್ಲೇಟಿನಿಂದ ಗಾಯಗೊಳ್ಳುವುದು ವ್ಯಕ್ತಿಗೆ ಶುಭ ತರುತ್ತದೆ ಎಂಬ ನಂಬಿಕೆ ಇದೆ. ಸ್ಥಳೀಯ ಆಡಳಿತಗಾರರು ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತರು ಕಲ್ಲು ತೂರಾಟದ ಪದ್ಧತಿ ಬಿಡುವಂತೆ ಒತ್ತಾಯಿಸುತ್ತಿದ್ದಾರೆ. ಕಲ್ಲು ತೂರಾಟ ಕ್ರೂರವಾದದ್ದು ಎಂದು ಹೇಳುತ್ತಾರೆ. ಆದರೆ, ಗ್ರಾಮಸ್ಥರು ಮಾತ್ರ ಈ ಪದ್ಧತಿ ಬಿಡಲು ಸಿದ್ಧವಿಲ್ಲ. ಪ್ರತಿ ವರ್ಷ ಸಂಭ್ರಮದೊಂದಿಗೆ ಪತ್ಥರೋಂ ಕಾ ಮೇಲಾ ನಡೆಸಲಾಗುತ್ತಿದೆ.


**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಫ್ಲಾಟ್‌ಗಳು ಭೋಗ್ಯಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಭೋಗ್ಯಕ್ಕಿವೆ.
ಬಿ.ಎಸ್. ಸಂತೋಷ
96322 67555
98440 65710

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಜೆ.ಹೆಚ್. ಪಟೇಲ್ ಬಡಾವಣೆ ಶಾಮನೂರು ಹತ್ತಿರ ಲಿಂಗಾಯತರು ಮನೆ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ 7000 ರಿಂದ 8000 ಇರುತ್ತದೆ.
9945417541

**ಪರ್ಷಿಯನ್ ಕ್ಯಾಟ್ (ಬೆಕ್ಕು) ಮರಿಗಳು ಫಾರ್ ಸೇಲ್**
94484 42699
86186 76919

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20X30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
94484 39639

**ನಿವೇಶನಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30×50 ಪೂರ್ವ, ಕೆ.ಹೆಚ್.ಬಿ. ಕಾಲೋನಿಯಲ್ಲಿ 50×80 ಪಶ್ಚಿಮ, ಶಾಮನೂರು ವಾಜಪೇಯಿ ಲೇಔಟ್‌ನಲ್ಲಿ 40×60 ಪೂರ್ವ, ನೌಕರರ ಬಡಾವಣೆಯಲ್ಲಿ 40×60 ಪೂರ್ವ ಅಳತೆಯ ನಿವೇಶನಗಳು ಮಾರಾಟಕ್ಕಿವೆ. ವಿಚಾರಿಸಿ:
9986617483 / 7899681386


**ಬೇಕಾಗಿದ್ದಾರೆ**
**ಹೋಟೆಲ್ ಫುಡ್ಡೀಸ್**
ಚರ್ಚ್ ರೋಡ್, ತೊಗಟವೀರ ಕಲ್ಯಾಣಮಂಟಪ ಹತ್ತಿರ, ಲೇಡೀಸ್ ಡಿಸ್‌ವಾಶ್, ಕ್ಯಾಪ್ಟನ್, ಬಿಲ್ಲಿಂಗ್, ವೈಟರ್
98861 56688

**ದೀಪಾವಳಿ, ರಾಜ್ಯೋತ್ಸವದ ಶುಭಾಶಯಗಳು**

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.
'ಸಮಾಜ ಸೇವಾ ಶ್ರೀ' ಪ್ರಶಸ್ತಿ ವಿಜೇತರಾದ
ಯೋಗರತ್ನ ಡಾ|| ಪರಶುರಾಮ್ ಎನ್.
ಮತ್ತು ಕುಟುಂಬ ವರ್ಗದವರು
ದರ್ಶನ್ ಸೋಲಾರ್ & ಎಲೆಕ್ಟ್ರಿಕಲ್ಸ್
ಬಿಐಇಟಿ ರಸ್ತೆ, ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಹತ್ತಿರ, ದಾವಣಗೆರೆ.
99163 31671


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ದೀಪಾವಳಿ, ರಾಜ್ಯೋತ್ಸವದ ಶುಭಾಶಯಗಳು**

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ಎಂ.ಆರ್. ಸಾಧಿಕ್
ಮಾಜಿ ಅಧ್ಯಕ್ಷರು,
ದಾವಣಗೆರೆ ಮಂಡಕ್ಕಿ ಉತ್ಪಾದಕರ ಕ್ಷೇಮಾಭಿವೃದ್ಧಿ ಸಂಘ,
ದಾವಣಗೆರೆ.


**WANTED**
Required for the post of Manager and Accountant for Shree Suparshwanath Jain Souharda. Minimum Requirement is to have Experience in co-op bank or Souharda as a Manager or Accountant. Contact
MAHAVEER SANGHVEE
94816 71954

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009
98458 61220

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ.
ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಗೋಲ್ಡ್ ಲೋನ್ ಮತ್ತು ಚಿನ್ನಾಭರಣ ಖರೀದಿ**
ಪ್ರತಿ ಗ್ರಾಂಗೆ ಲೋನ್ 5600/- ಖರೀದಿ 8000 ಪ್ರತಿ ಗ್ರಾಂಗೆ.
ಆಸಕ್ತರು ಸಂಪರ್ಕಿಸಿ :
87110 04905

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ದಾವಣಗೆರೆ - 4. ಸಂಪರ್ಕಿಸಿ :
84948 20288

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಮನೆ ಮಾರಾಟಕ್ಕಿದೆ**
ಡೋ.ನಂ. 356/10C ಸವಣೂರು ಪ್ಲಾಜಾ ಹಿಂಭಾಗ PB ರೋಡ್, ದಾವಣಗೆರೆ 60+55/2x40= 230 ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ :
97422 61666, 94498 96502

**ವಾಹ್ ಚಾಯ್ !! ರಿಚ್ ಚಾಯ್ !!**
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ERA GROUP OF COMPANIES**
**CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**REQUIRED**
Male candidate for Sales & Marketing Executive
Minimum 2 years experience in Sales & Marketing.
AM Builders, Vidyanagar last city Bus stop Davanagere.
8951938228, 8050222047

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**RAJASTHAN TOUR**
Dep: 29th NOV, Duration: 10 Days
Premium PKG Rs 59,600 pp
DVG WORLD TOURS
P J Exten, Davanagere.
99006 66122

# ನಾಡಿದ್ದು ಶ್ರೀಶೈಲ ಪೀಠದ ಉಭಯ ಜಗದ್ಗುರುಗಳ ಸ್ಮರಣೋತ್ಸವ, ಧರ್ಮ ಸಮ್ಮೇಳನ

ದಾವಣಗೆರೆ, ನ. 1 - ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 38ನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮವು ಇದೇ ದಿನಾಂಕ 4 ರಿಂದ ಮೂರು ದಿನಗಳ ಕಾಲ ನಗರದ ಶ್ರೀ ಡಾ. ಸದ್ಯೋಜಾತ ಸ್ವಾಮೀಜಿ ಹಿರೇಮಠದಲ್ಲಿ ನಡೆಯಲಿದೆ.

ಜೊತೆಗೆ, ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 13ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವೂ ಜರುಗಲಿದೆ ಎಂದು ಪುಣ್ಯಾರಾಧನಾ ಸೇವಾ ಸಮಿತಿ ಕಾರ್ಯಾಧ್ಯಕ್ಷ ಎನ್.ಎ. ಮುರುಗೇಶ್ ತಿಳಿಸಿದ್ದಾರೆ.

ಈ ಎಲ್ಲಾ ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯವನ್ನು ಉಜ್ಜಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ಮತ್ತು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ವಹಿಸುವರು.

ನಾಡಿದ್ದು ದಿನಾಂಕ 4ರ ಸೋಮವಾರ ಸಂಜೆ 6 ಗಂಟೆಗೆ ಭಾವೈಕ್ಯ ಜನಜಾಗೃತಿ ಧರ್ಮ ಸಮಾರಂಭ ನಡೆಯಲಿದ್ದು, ರಾಮಘಟ್ಟದ ಶ್ರೀ ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಮುಷ್ಟೂರು ಓಂಕಾರ ಉಚ್ಚನಾಗಲಿಂಗ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಲಿದ್ದು, ಎಡೆಯೂರು ಬಾಳೇ ಹೊನ್ನೂರು ಶಾಖಾಮಠದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ ನಾಂದಿ ನುಡಿಗಳನ್ನಾಡುವರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಸಮಾರಂಭ ಉದ್ಘಾಟಿಸಲಿದ್ದು, ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ನಗರಪಾಲಿಕೆ ಸದಸ್ಯ ಎ. ನಾಗರಾಜ್ ಮುಖ್ಯ ಅತಿಥಿಗಳಾಗಿದ್ದಾರೆ.

ವೀರಶೈವ ಧರ್ಮವನ್ನು ಪೋಷಿಸಿದ ರಾಜ ಮನೆತನಗಳು ವಿಷಯ ಕುರಿತು ವಿಶ್ರಾಂತ ಪ್ರಾಧ್ಯಾಪಕ ಸಿ.ಜಿ. ಮಠಪತಿ (ಹಿಪ್ಪರಗಿ-ಬೆಳಗಾವಿ) ಉಪನ್ಯಾಸ ನೀಡುವರು.

ಸಾಹಿತ್ಯ ಕ್ಷೇತ್ರದ ಸೇವೆಗೆ ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತ ಬಾ.ಮ. ಬಸವರಾಜಯ್ಯ ಅವರನ್ನು ಸನ್ಮಾನಿಸಲಾಗುತ್ತದೆ.

**ಗುರುರಕ್ಷೆ:** ಶ್ರೀಮತಿ ಸೌಭಾಗ್ಯ ಬೀಳಗಿಮಠ, ಎಸ್ಪಿ ಉಮಾ ಪ್ರಶಾಂತ್, ಪೊಲೀಸ್ ನಿರೀಕ್ಷಕರಾದ ಶ್ರೀಮತಿ ಮಲ್ಲಮ್ಮ ಚೌಬೆ, ನಗರಪಾಲಿಕೆ ಸಹಾಯಕ ಆಯುಕ್ತರಾದ ಶ್ರೀಮತಿ ಲಕ್ಷ್ಮಿ, ಬೆಳ್ಳೂಡಿ ಶಿವಕುಮಾರ್, ವಿ.ಆರ್. ಮಠ (ಸಾಲಕಟ್ಟೆ), ಹೆಚ್.ಎಂ. ನಾಗರಾಜ್, ವಿಜಯಕುಮಾರ್ ಅಣಬೂರು ಮಠ, ಯಲವಟ್ಟಿ ಹಾಲೇಶ್.

ಶ್ರೀಮತಿ ವಿಜಯ ಎಂ. ಹಿರೇಮಠ ಸಂಗೀತ ಸೇವೆ ಒದಗಿಸಲಿದ್ದು, ವಕೀಲ ಡಿ.ಎ.ಂ ಹಾಲಸ್ವಾಮಿ, ಎಂ.ಎನ್. ಹರೀಶ್, ಆವರಗೊಳ್ಳದ ವಾಗೀಶ್ವರಯ್ಯ, ಅಧ್ಯಾಪಕರಾದ ಶ್ರೀಮತಿ ಸೌಭಾಗ್ಯಮ್ಮ ಎಸ್. ಹಿರೇಮಠ ಅವರುಗಳು ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಮಾಡಲಿದ್ದಾರೆ.

ದಿನಾಂಕ 5ರ ಮಂಗಳವಾರ ಸಂಜೆ 6 ಗಂಟೆಗೆ ಏರ್ಪಾಡಾಗಿರುವ ಧರ್ಮ ಸಮಾರಂಭದ ಅಧ್ಯಕ್ಷತೆಯನ್ನು ಹೊನ್ನಾಳಿ ಹಿರೇಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ವಹಿಸುವರು.

ಕೇಂದ್ರದ ಮಾಜಿ ಸಚಿವ ಡಾ. ಜಿ.ಎಂ. ಸಿದ್ದೇಶ್ವರ, ವಿಧಾನ ಪರಿಷತ್ತಿನ ಮಾಜಿ ಮುಖ್ಯಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕ ಎಸ್.ವಿ. ರಾಮಚಂದ್ರ,





ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ದೂಡಾ ಮಾಜಿ ಅಧ್ಯಕ್ಷರುಗಳಾದ ಯಶವಂತರಾವ್ ಜಾಧವ್, ದೇವರಮನಿ ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀ ಗುರುಬಸವ ಮಹಾಂತ ಶಿವಾಚಾರ್ಯ ಸ್ವಾಮೀಜಿ (ತೊಗರ್ಸಿ ಮಳೆಮಠ) ನಾಂದಿ ನುಡಿಗಳನ್ನಾಡುವರು. ನಾಡಿನ ಹಿರಿಯ ಸಾಹಿತಿ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರು ಆರೋಗ್ಯ ಮತ್ತು ಅಧ್ಯಾತ್ಮ ವಿಷಯ ಕುರಿತು ಉಪನ್ಯಾಸ ನೀಡುವರು.

**ಗುರು ರಕ್ಷೆ :** ಹಿರಿಯ ವೈದ್ಯ ಡಾ. ಎಸ್.ಎಂ. ಎಲಿ, ವರ್ತಕ ರಮಣ್‌ಲಾಲ್ ಪಿ. ಸಂಘವಿ, ಚರ್ಮರೋಗ ತಜ್ಞರಾದ ಡಾ ಕುಸುಗೂರು ಮಠ, ಶ್ವಾಸಕೋಶ ತಜ್ಞ ಡಾ. ಬಿ. ಪಿ. ರಾಜೇಶ್, ಹಿರಿಯ ನೇತ್ರ ತಜ್ಞ ಡಾ. ರವೀಂದ್ರನಾಥ್, ವರ್ತಕರಾದ ಎಸ್. ನಾಗರಾಜ್, ಕೆ. ಬಸವಲಿಂಗಪ್ಪ, ಶ್ರೀಮತಿ ಗೀತಾ ಸಂಕ್ಲೀಪುರ, ಮಧು ಹಾಲೇಶ್.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ, ವರ್ತಕ ಬೆಳ್ಳೂಡಿ ಜ್ಯೋತಿ ಪ್ರಕಾಶ್, ಲೆಕ್ಕ ಪರಿಶೋಧಕ ರಾಧೇಶ್ ಜಂಬಿಗಿ, ಸಾಹಿತಿ ಶಿವಯೋಗಿ ಹಿರೇಮಠ ಶಿವಕುಮಾರ್ ಡಿ. ಶೆಟ್ಟರ್, ಜಗದ್ಗುರುಗಳಿಗೆ ಗೌರವಾರ್ಪಣೆ ಮಾಡಲಿದ್ದು, ಟಿ.ಹೆಚ್. ಶಿವಕುಮಾರಸ್ವಾಮಿ ಮತ್ತು ಸಂಗಡಿಗರು ಸಂಗೀತ ಸೇವೆ ಒದಗಿಸುವರು. ಕು. ಭಾರ್ಗವಿ ಮತ್ತು ಸೌಂದರ್ಯ ಭರತ ನಾಟ್ಯ ನಡೆಸಿಕೊಡುವರು.

ದಿನಾಂಕ 6ರ ಬುಧವಾರ ಸಂಜೆ 6 ಗಂಟೆಗೆ ನಡೆಯುವ ಧರ್ಮ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ (ತೊಗರ್ಸಿ) ಮತ್ತು ಶ್ರೀ ಡಾ. ಒಡೆಯರ್ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ (ಬಸವನ ಬಾಗೇವಾಡಿ) ಸಮ್ಮುಖ ವಹಿಸುವರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಕಾರ್ಯಕಾರಿ ಮಂಡಳಿ ಅಧ್ಯಕ್ಷ ಎ.ಹೆಚ್. ಕುಬೇರಪ್ಪ, ಉದ್ಯಮಿ ಹನುಮಂತಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀ ಪಶುಪತಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ (ದಿಂಡದಹಳ್ಳಿ ಮಠ) ನಾಂದಿ ನುಡಿಗಳನ್ನಾಡಲಿದ್ದು, ಬಳ್ಳಾರಿಯ ಚಿಕ್ಕಾಟೆ ಮಠದ ವೀರಭದ್ರಯ್ಯ ಅವರು ಸಮಾಜ ಮತ್ತು ಪಂಚಪೀಠಗಳ ಮಹತ್ವ ಕುರಿತಂತೆ ಉಪನ್ಯಾಸ ನೀಡುವರು.

**ಗುರು ರಕ್ಷೆ :** ಸಕ್ಕರೆ ಕಾಯಿಲೆ ತಜ್ಞ ಡಾ. ವಿನಯ್‌ಕುಮಾರ್ ಸ್ವಾಮಿ, ವರ್ತಕ ಎನ್.ಕೆ. ಚನ್ನವೀರಪ್ಪ, ಶ್ರೀಮತಿ ಸಾವಿತ್ರಮ್ಮ ಮತ್ತು ವಿ. ಹನಿಮಂತ ಶ್ರೇಷ್ಠಿ, ಶ್ರೀಮತಿ ಬಸಮ್ಮ ಕೆ.ಜಿ. ಹಾಲಪ್ಪ (ಧೂಳೆಹೊಳೆ), ಶ್ರೀಮತಿ ಶ್ಯಾಮಲ ಮತ್ತು ಎನ್.ಎಂ. ಹಾಲಸ್ವಾಮಿ, ಶ್ರೀಮತಿ ಶೋಭಾ ಮತ್ತು ಎ.ಎಂ. ಪ್ರಕಾಶ್ (ಬಸವೇಶ್ವರ ಮುದ್ರಣ), ಟಿ.ಎನ್. ನಾಗರಾಜ್ (ದೀಟೂರು).

ಎನ್.ಎಂ. ತಿಪ್ಪೇಸ್ವಾಮಿ, ಎಸ್.ಎಂ. ರುದ್ರಮುನಿ, ಶಿವಾನಂದ ಭಾನುವಳ್ಳಿ (ಹರಿಹರ), ನಿರಂಜನ ದೇವರಮನೆ (ಚಿತ್ರದುರ್ಗ), ಎನ್.ಹೆಚ್. ಪಟೇಲ್ (ಹರಿಹರ), ಪಿ.ಜಿ. ರಾಜಶೇಖರಯ್ಯ ಅವರುಗಳು ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಮಾಡಲಿದ್ದು, ವಿಧೂಷಿ ಸಂಗೀತ ರಾಘವೇಂದ್ರ ವರ್ಣೇಕರ್ ಸಂಗೀತ ಸೇವೆ ಒದಗಿಸುವರು.

ಕಾರ್ಯಕ್ರಮದ ವಿವರಕ್ಕಾಗಿ ಶ್ರೀಶೈಲ ಮಠದ ವ್ಯವಸ್ಥಾಪಕರಾದ ಎಂ. ಬನ್ನಯ್ಯ (99869-22077) ಅವರನ್ನು ಸಂಪರ್ಕಿಸಬಹುದು.

## ಇಷ್ಟಲಿಂಗ ಮಹಾಪೂಜೆ



ನಾಡಿದ್ದು ದಿನಾಂಕ 4ರ ಸೋಮವಾರ ಬೆಳಿಗ್ಗೆ 8.30ಕ್ಕೆ ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರಿಂದ ಇಷ್ಟಲಿಂಗ ಮಹಾಪೂಜೆ ಕಾರ್ಯಕ್ರಮವನ್ನು ವಿನೋಬನಗರದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

## ರಜತ ಮೂರ್ತಿಗಳ ಮೆರವಣಿಗೆ

ದಿನಾಂರ 6ರ ಬುಧವಾರ ಬೆಳಿಗ್ಗೆ 8 ಗಂಟೆಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಪೂಜೆ, ಹೂವಿನ ಅಲಂಕಾರ, ದೀಕ್ಷಾ ಕಾರ್ಯಕ್ರಮ ನಡೆಯಲಿದೆ. ನಂತರ ಲಿಂ. ಉಭಯ ಜಗದ್ಗುರುಗಳ ರಜತ ಮೂರ್ತಿಗಳ ಮೆರವಣಿಗೆಯು ನಗರದ ರಾಜಬೀದಿಗಳಲ್ಲಿ ಜರುಗಲಿದೆ.

# ಜಗಳೂರು ಉತ್ಸವ, ಸಾಹಿತ್ಯ ಸಮ್ಮೇಳನ ಅದ್ಧೂರಿ ಆಚರಣೆ

## ಎಲ್ಲರೂ ಪಕ್ಷಾತೀತವಾಗಿ ಸಹಕರಿಸಲು ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಬಿ.ದೇವೇಂದ್ರಪ್ಪ ಕರೆ



ಜಗಳೂರು, ನ.1- ತಾಲ್ಲೂಕಿನಲ್ಲಿ ಡಿಸೆಂಬರ್ ತಿಂಗಳು ಮೂರು ದಿನಗಳ ಕಾಲ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಜಗಳೂರು ಉತ್ಸವವನ್ನು ಅದ್ಧೂರಿ ಯಾಗಿ ಆಯೋಜಿಸಲಾಗುವುದು ಸರ್ವರೂ ಪಕ್ಷಾತೀತವಾಗಿ ಸಹಕರಿಸಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಬಯಲು ರಂಗಮಂದಿರದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಇಂದು ಹಮ್ಮಿಕೊಂಡಿದ್ದ 69 ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಜಯನಗರ ಸಾಮ್ರಾಜ್ಯ ಪತನದ ನಂತರ ಹರಿದು ಹಂಚಿ ಹೋಗಿದ್ದ ಕರ್ನಾಟಕದ ಪುನರ್ ಏಕೀಕರಣದ ಸವಿನೆನಪಿಗಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಚರಿಸುತ್ತಿದ್ದೇವೆ. ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿ ಯುವ ಪೀಳಿಗೆಗೆ ಸಾರ್ವಕಾಲಿಕ ದಾರಿದೀಪಗಳಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾರಿಗೊಳಿಸಿದ 5 ಗ್ಯಾರಂಟಿ ಯೋಜನೆಗಳು ಕಟ್ಟಕಡೆಯ ವ್ಯಕ್ತಿಗೂ ತಲುಪುವ ಮೂಲಕ ಆರ್ಥಿಕ ಸಂಕಷ್ಟ ಸುಧಾರಣೆಯೊಂದಿಗೆ ಜನಪರ ಆಡಳಿತಕ್ಕೆ ಸಾಕ್ಷಿಯಾಗಿ ಜಾತ್ಯಾತೀತ ಜನನಾಯಕರಾಗಿದ್ದಾರೆ ಎಂದು ಬಣ್ಣಿಸಿದರು.

ಶಿಕ್ಷಣ ಸ್ವಾಭಿಮಾನದ ಪ್ರತಿಬಿಂಬವಾಗಿದ್ದು ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣದೊಂದಿಗೆ ಉಜ್ವಲ ಭವಿಷ್ಯ ರೂಪಿಸಬೇಕು. ಆಸ್ತಿ ಗಳಿಕೆಗಿಂತ ಮಕ್ಕಳನ್ನೇ ಆಸ್ತಿಯನ್ನಾಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಮಾತನಾಡಿ, ಮೈಸೂರು ಸಂಸ್ಥಾನದಿಂದ ಕರ್ನಾಟಕ ವಿಭಜನೆಗೊಂಡು ಪ್ರತ್ಯೇಕ ರಾಜ್ಯವಾಗಿ ಘೋಷಣೆಗೊಂಡು 69 ವರ್ಷಗಳು ಗತಿಸಿವೆ. ಪ್ರಾಕೃತಿಕ ಸಂಪತ್ತು, ಭವ್ಯ ಪರಂಪರೆ, ಇತಿಹಾಸ, ಸಂಸ್ಕೃತಿ ನೆಲೆಬೀಡಿನ ಕರ್ನಾಟಕದಲ್ಲಿ ಜನಿಸಿದ ನಾವು ಪುಣ್ಯವಂತರು. ಜಾತ್ಯಾತೀತವಾಗಿ ಕನ್ನಡ ನಾಡು ನುಡಿ ಭಾಷೆ ನೆಲಜಲದ ಋಣ ತೀರಿಸಲು ಪ್ರತಿಯೊಬ್ಬ ಕನ್ನಡಿಗನೂ ಸಂಕಲ್ಪ ಮಾಡಬೇಕು ಎಂದರು.

ಸಾಹಿತಿ ಡಿ.ಸಿ. ಮಲ್ಲಿಕಾರ್ಜುನ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಅಂಬೇಡ್ಕರ್ ವೃತ್ತದಿಂದ ವೇದಿಕೆ ವರೆಗೆ ಭುನೇಶ್ವರಿ ದೇವಿಯ ಅದ್ದೂರಿ ಮೆರವಣಿಗೆ ನಡೆಯಿತು.

ವಿವಿಧ ಶಾಲಾ ಮಕ್ಕಳಿಂದ ಪಥ ಸಂಚಲನ, ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

**ಹೊರ ನಡೆದ ಪಟ್ಟಣ ಪಂಚಾಯಿತಿ ಸದಸ್ಯರು:** ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಿಂದ ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹೊರ ನಡೆದ ಪ್ರಸಂಗ ನಡೆಯಿತು.

ವೇದಿಕೆಯ ಎರಡನೇ ಸಾಲಿನಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಕುರ್ಚಿಗಳನ್ನು ಹಾಕಿರುವು ದರಿಂದ ಅಸಮಾಧಾನ ಗೊಂಡು ಧ್ವಜಾರೋ ಹಣದ ನಂತರ ಕಾರ್ಯಕ್ರಮದಿಂದ ಹೊರ ನಡೆದರು. ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲದವರೂ ಸಹ ವೇದಿಕೆಯ ತುಂಬಾ ಕುಳಿತು ಶಿಷ್ಟಾಚಾರ ಉಲ್ಲಂಘನೆಯ ಪ್ರಸಂಗವೂ ಕೂಡ ಸಮಾರಂಭದಲ್ಲಿ ನಡೆಯಿತು.

ತಾ.ಪಂ. ಇಓ ಕೆಂಚಪ್ಪ, ಬಿಇಓ ಹಾಲಮೂರ್ತಿ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸಾಹಿತಿ ಎನ್.ಟಿ. ಎರ್ರಿಸ್ವಾಮಿ, ಸಿಪಿಐ ಶ್ರೀನಿವಾಸರಾವ್, ಎಇಇ ಗಳಾದ ಸಾಧಿಕ್ ಉಲ್ಲಾ, ಶಿವಮೂರ್ತಿ, ಪ್ರಾಂಶುಪಾಲ ಎ.ಎಲ್. ತಿಪ್ಪೇಸ್ವಾಮಿ, ಸತೀಶ್, ಮುಖಂಡರಾದ ಷಂಷೀರ್ ಅಹಮ್ಮದ್, ಬಿ.ಮಹೇಶ್ವರಪ್ಪ ಸೇರಿ ದಂತೆ ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು



ದಾವಣಗೆರೆ, ನ. 1- ಸ್ಥಳೀಯ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿ ರುವ ಶ್ರೀ ಮಾತಾ ಅನ್ನಪೂ ರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ದಿನಾಂಕ 2ರ ಶನಿವಾ ರದಿಂದ ಬರುವ ಡಿಸೆಂಬರ್ 1ರ ಭಾನುವಾರದವರೆಗೆ ಕಾರ್ತಿಕ ಮಾಸದ ಪ್ರಯುಕ್ತ ಪ್ರತಿನಿತ್ಯ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇದೇ ದಿನಾಂಕ 12ರ ಮಂಗಳವಾರ ಕಾರ್ತಿಕ ಶುದ್ಧ ಏಕಾದಶಿಯಂದು ಶ್ರೀ ದತ್ತಾತ್ರೇಯ ಸ್ವಾಮಿಗೆ, ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ಮತ್ತು ಶ್ರೀ ಸತ್ಯನಾರಾಯಣ ಸ್ವಾಮಿಗೆ ಕ್ಷೀರಾಭಿಷೇಕ ಹಮ್ಮಿಕೊಳ್ಳಲಾಗಿದ್ದು, ಶ್ರೀಮತಿ ಚೂಡಾಮಣಿ ಮತ್ತು ಆರ್.ಜಿ. ನಾಗೇಂದ್ರ ಪ್ರಕಾಶ್ ಕುಟುಂಬದವರು, ಶ್ರೀಮತಿ ನಾಗಮಣಿ ಮತ್ತು ಕೆ.ಜಿ. ಸುಗಂಧರಾಜ ಶೆಟ್ರು ಕುಟುಂಬದವರು ಹಾಗೂ ಶ್ರೀಮತಿ ಪ್ರಭಾ ಮತ್ತು ಆರ್.ಎಸ್. ರವೀಂದ್ರ ಕುಟುಂಬದವರು ಸೇವಾಕರ್ತರಾಗಿದ್ದಾರೆ.

ದಿನಾಂಕ 13ರ ಬುಧವಾರ ಉತ್ಥಾನ ದ್ವಾದಶಿಯಂದು ಸಂಜೆ 6.30ಕ್ಕೆ ಶ್ರೀ ತುಳಸಿ ದಾಮೋದರ ವಿವಾಹ ನಡೆಯಲಿದ್ದು ಶ್ರೀಮತಿ ಜ್ಯೋತಿ ಶಂಕರರಾವ್ ಅಂಬರ್‌ಕರ್ ಕುಟುಂಬದವರು ಸೇವಾಕರ್ತರಾಗಿದ್ದಾರೆ.

15ರ ಶುಕ್ರವಾರ ಶ್ರೀ ದೊಡ್ಡಗೌರಿ ಹುಣ್ಣಿಮೆ ಪ್ರಯುಕ್ತ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದ್ದು, ಶ್ರೀಮತಿ ಮಂಜುಳಾ, ಕುಮಾರಸ್ವಾಮಿ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ.

ದಿನಾಂಕ 19ರ ಮಂಗಳವಾರ ಶ್ರೀ ಸಂಕಷ್ಟ ಚತುರ್ಥಿ ಕಾರ್ಯಕ್ರಮವಿದ್ದು, ರಾತ್ರಿ 7.30ಕ್ಕೆ ಶ್ರೀ ಗಣಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ. ಶ್ರೀಮತಿ ಶೋಭಾ ಮತ್ತು ಗಂಗಾಧರ ಮತ್ತು ಚಾರ್‌ಮನಿ ಕುಟುಂಬದವರು ಸೇವಾಕರ್ತರಾಗಿದ್ದಾರೆ.

ಡಿಸೆಂಬರ್ 1ರ ಭಾನುವಾರ ಕಾರ್ತಿಕ ಅಮಾವಾಸ್ಯೆ (ಛಟ್ಟಿ ಅಮವಾಸ್ಯೆ) ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಮಹಾಮಂಗಳಾರತಿ,ತೀರ್ಥ ಪ್ರಸಾದ ವಿನಿಯೋಗವಿದ್ದು, ಶ್ರೀಮತಿ ಆದಿಲಕ್ಷ್ಮಿ ವಿ.ವಿ.ವಿ. ಸತ್ಯನಾರಾಯಣ, ಶ್ರೀಮತಿ ಶ್ರೀದೇವಿ ಮತ್ತು ಶ್ರೀನಿವಾಸ ರಾಜು ಹಾಗೂ ಸಹ ಕುಟುಂಬದವರು ಪ್ರಧಾನ ಸೇವಾಕರ್ತರಾಗಿದ್ದಾರೆ.

1ರ ಸಂಜೆ 7 ಕ್ಕೆ ಸಹಸ್ರ ದೀಪೋತ್ಸವ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನೆರವೇರಲಿದೆ. ಬರುವ ಡಿಸೆಂಬರ್ 15 ರ ಭಾನುವಾರ ಹೊಸ್ತಿಲ ಹುಣ್ಣಿಮೆ ಹಾಗೂ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಜಯಂತ್ಯೋತ್ಸವದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದ್ದು, ಶ್ರೀಮತಿ ಲಕ್ಷ್ಮಮ್ಮ ಮತ್ತು ಸಹ ಕುಟುಂಬದವರು ಬಿ. ಹೆಚ್. ಗ್ರೂಪ್‌ನವರು ಪ್ರಧಾನ ಸೇವಾಕರ್ತರಾಗಿದ್ದಾರೆ.

**ಬರುವ 2025, ಫೆಬ್ರವರಿ 4 ರಂದು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ 27ನೇ ವಾರ್ಷಿಕೋತ್ಸವ ನಡೆಸಲು ಸಂಕಲ್ಪ ಹೊಂದಿದ್ದು, ತತ್ಸಂಬಂಧ ಸುಹಾಸಿನಿಯರ ಹಸ್ತದಿಂದ ಇದೇ ದಿನಾಂಕ 16 ರಿಂದ ಪ್ರತಿ ಶನಿವಾರ ಸಂಜೆ 5ಕ್ಕೆ ದೇವಸ್ಥಾನದಲ್ಲಿ ಶ್ರೀ ವಿಷ್ಣುವಿಗೆ ಕ್ಷೀರಾಭಿಷೇಕ ನಂತರ ತುಳಸಿ ಅರ್ಚನೆ, ಹನುಮಾನ್ ಚಾಲೀಸಾ ಪಠಣ ಹಾಗೂ ಉಯ್ಯಾಲೋತ್ಸವವನ್ನು ನೆರವೇರಿಸಲಾಗುವುದು.**

# ಕನ್ನಡ ನಾಡು ಕಲೆ, ಸಾಹಿತ್ಯ, ಸಂಸ್ಕೃತಿಗಳ ತವರೂರು



ದಾವಣಗೆರೆ, ನ.1- ಕನ್ನಡ ನಾಡು ಕಲೆ, ಸಾಹಿತ್ಯ, ಸಂಸ್ಕೃತಿಗಳ ತವರೂರಾಗಿದೆ. ಇಂತಹ ಪುಣ್ಯಭೂಮಿಯಲ್ಲಿ ಜನಿಸಿ ತಮ್ಮ ಬದುಕನ್ನು ಕಟ್ಟಿಕೊಂಡ ಕನ್ನಡಿಗರೇ ಭಾಗ್ಯಶಾಲಿಗಳು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಬಣ್ಣಿಸಿದರು.

ಸ್ಥಳೀಯ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ವಿದ್ಯಾನಗರ ಲಯನ್ಸ್ ಕ್ಲಬ್ ಹಾಗೂ ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಗಳು ಜಂಟಿಯಾಗಿ ಇಂದು ಆಯೋಜಿಸಿದ್ದ 69 ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ನಾಡಧ್ವಜ ಆರೋಹಣ ಮಾಡಿ ಅವರು ಮಾತನಾಡಿದರು.

ವಿಶ್ವದ ಯಾವುದೇ ಭಾಷೆಗಿರದ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಸೊಗಡು ಕನ್ನಡ ಭಾಷೆಗಿದೆ. ಸಾವಿರಾರು ವರ್ಷಗಳ ಭವ್ಯ ಪರಂಪರೆಯಿದೆ. ಇಂತಹ ಪವಿತ್ರವಾದ ಕನ್ನಡ ಭಾಷೆಯನ್ನು ಇನ್ನಷ್ಟು ವೈಭವೀಕರಿಸಿ ಕನ್ನಡ ಭಾಷೆಯ ಬಳಸುವಿಕೆಯನ್ನು ಹೆಚ್ಚಿಸುವುದು ನಮ್ಮ ಸಂಕಲ್ಪವಾಗಬೇಕು ಎಂದರು.

ದಾವಣಗೆರೆ-ವಿದ್ಯಾನಗರ ಲಯನ್ಸ್ ಕ್ಲಬ್ ಅಧ್ಯಕ್ಷ ಎಲ್.ಎಸ್.ಪ್ರಭುದೇವ್ ರಾಜ್ಯೋತ್ಸವದ ಅಂಗವಾಗಿ ರಾಷ್ಟ್ರಧ್ವಜವನ್ನು ಆರೋಹಣ ಮಾಡಿ ಮಾತನಾಡಿ, ಕನ್ನಡವನ್ನೇ ಎಲ್ಲಾ ಕಡೆ ಬಳಸುವುದರ ಮೂಲಕ ಕನ್ನಡ ನುಡಿಯನ್ನು ಹೆಚ್ಚು ಪ್ರಚಲಿತಗೊಳಿಸಿ ನಮ್ಮತನವನ್ನು ಮೆರೆಯಬೇಕು. ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎನ್ನುವ ರಾಷ್ಟ್ರ ಕವಿ ಕುವೆಂಪು ವಾಣಿಯು ನಮ್ಮ ಪ್ರತಿ ನಿತ್ಯದ ಸ್ಮರಣೆಯಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಮಾತನಾಡಿ, ಕರ್ನಾಟಕ ರಾಜ್ಯೋತ್ಸವವು ಪ್ರತಿಯೊಬ್ಬ ಕನ್ನಡಿಗನ ಮನೆಯಲ್ಲಿ ಆಚರಿಸಬೇಕು. ಕನ್ನಡ ನಾಡು - ನುಡಿ - ನೆಲ - ಜಲ - ಕಲೆ - ಸಂಸ್ಕೃತಿಗಳ ರಕ್ಷಣೆ ಸರ್ವ ಕನ್ನಡಿಗರ ಹೊಣೆಗಾರಿಕೆಯಾಗಿದೆ. ಕನ್ನಡ ನಾಡು ನುಡಿಯ ಅಸ್ಮಿತೆಗೆ ಆಪತ್ತು ಬಂದಾಗ, ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಕನ್ನಡಿಗರೆಲ್ಲರೂ ಒಂದಾಗಿ ಹೋರಾಡಬೇಕು ಎಂದು ಹೇಳಿದರು.

**ಕುವೆಂಪು ಕನ್ನಡ ಭವನದಲ್ಲಿ ಭುವನೇಶ್ವರಿಯ ಪುತ್ಥಳಿಯನ್ನು ಪ್ರತಿಷ್ಠಾಪಿಸಲಾಗುವುದು.**
**- ಬಿ.ವಾಮದೇವಪ್ಪ, ಜಿಲ್ಲಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್**

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ಅವರ ಪರಿಕಲ್ಪನೆಯಲ್ಲಿ ರಾಜ್ಯೋತ್ಸವದ ಅಂಗವಾಗಿ ಕನ್ನಡ ಭವನವನ್ನು ವಿಶೇಷವಾಗಿ ಶೃಂಗರಿಸಿದ್ದು ಸಮಾರಂಭಕ್ಕೆ ಮೆರಗು ನೀಡಿತ್ತು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸುಮತಿ ಜಯಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾದ ವಿದುಷಿ ಶೋಭಾ ರಂಗನಾಥ್ ಕನ್ನಡಾಂಬೆ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ರಾಜ್ಯೋತ್ಸವ ಸಂಭ್ರಮಕ್ಕೆ ಚಾಲನೆ ನೀಡಿದರು.

ಕವಿ ಕೆ.ಎಸ್.ನಿಸಾರ್ ಅಹಮದ್ ರಚಿತ 'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ' ಹಾಡನ್ನು ಕಲಾವಿದ ಹೆಗ್ಗೆರೆ ರಂಗಪ್ಪ ಪ್ರಸ್ತುತ ಪಡಿಸಿದರು. ಕವಿ ಪಿ.ಜಯರಾಮನ್ ಅವರು ಕರ್ನಾಟಕ ಸಂಭ್ರಮ-50 ರ ಅಂಗವಾಗಿ ವಿಶೇಷವಾಗಿ ರಚಿಸಿದ ಕವನವನ್ನು ಓದಿದರು.

ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಯ ವಿದ್ಯಾರ್ಥಿಗಳು ರಾಷ್ಟ್ರಗೀತೆ ಹಾಗೂ ನಾಡಗೀತೆಯನ್ನು ಪ್ರಸ್ತುತ ಪಡಿಸಿದರು. ಭಾರತ ಸೇನಾದಳದ ಸಂಪನ್ಮೂಲ ವ್ಯಕ್ತಿಗಳಾದ ಗೋಪಾಲಪ್ಪ ಎ.ಆರ್. ಹಾಗೂ ಹೆಚ್.ಹನುಮಂತಪ್ಪ ಧ್ವಜ ನಿರ್ವಹಣೆ ಮಾಡಿದರು. ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ವಂದಿಸಿದರು.

ರಾಜ್ಯೋತ್ಸವ ಸಮಾರಂಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಗೌರಮ್ಮ ಗಿರೀಶ್, ಬಾ.ಮ. ಬಸವರಾಜಯ್ಯ, ಕಲಾವಿದ ಮಹಾಲಿಂಗಪ್ಪ, ನಿವೃತ್ತ ಪ್ರಾಚಾರ್ಯ ಗುಡ್ಡಪ್ಪ, ಹೆಚ್.ಎನ್. ಶಿವಕುಮಾರ್, ಹೆಗ್ಗೆರೆ ರಂಗಪ್ಪ, ಎನ್.ಎಸ್. ರಾಜು, ವೀಣಾ ಕೃಷ್ಣಮೂರ್ತಿ, ಎಸ್.ಎಂ. ಮಲ್ಲಮ್ಮ, ಸುದರ್ಶನ್, ಸೌಮ್ಯ ಸತೀಶ್ ಹಾಗೂ ಇತರರು ಉಪಸ್ಥಿತರಿದ್ದರು.

## ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ದೇಬ್ರಾಯ್ ನಿಧನ

ನವದೆಹಲಿ, ನ. 1 - ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಬಿಬೇಕ್ ದೇಬ್ರಾಯ್ ಅವರು ಶುಕ್ರವಾರ ನಿಧನರಾಗಿದ್ದಾರೆ. ನಿನ್ನೆ ಆಸ್ಪತ್ರೆಗೆ ದಾಖಲಾಗಿದ್ದರು.

**ನೇತ್ರ ದಾನ ಶ್ರೇಷ್ಠ ದಾನ**


**ಬೆಳಕಿನ ಹಬ್ಬದ ಶುಭಾಶಯಗಳು**



2024
ಎಲ್ಲರ ಮನೆ-ಮನಗಳಲ್ಲಿ ದೀಪಾವಳಿಯ ಬೆಳಕು ಪ್ರಜ್ವಲಿಸಲಿ. ಸರ್ವರಿಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು.
ಡಿ. ಕೆ. ಸಂಗಮೇಶ್ ಎಲಿಗಾರ್
ಪತ್ರ ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ,
ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710

**ದೀಪಾವಳಿ ಹಬ್ಬದ ಶುಭಾಶಯಗಳು**



ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ದೀಪಾವಳಿ ಬೆಳಕು ಎಲ್ಲರ ಬಾಳಲ್ಲಿ ಬೆಳಗಲಿ. ಸರ್ವರಿಗೂ ಸುಖ-ಶಾಂತಿ ನೆಮ್ಮದಿ ತರಲೆಂದು ಶುಭ ಹಾರೈಸುತ್ತೇನೆ.
ಪರಶುರಾಮಪ್ಪ ಪೂಜಾರ್, ಜಿಲ್ಲಾ ಪತ್ರ ಬರಹಗಾರರು,
ಉಪ ನೋಂದಣಿ ಕಛೇರಿ ಆವರಣ, ದಾವಣಗೆರೆ. ಮೊ. : 89703 96509

**ರವಿ ನರ್ಸಿಂಗ್ ಹೋಂ**
ISO-9001-2008 Certified Organization
(ಕೆಂಚಪ್ಪ ಆಸ್ಪತ್ರೆ),
ಮಹಾವೀರ ರಸ್ತೆ, ದಾವಣಗೆರೆ-1.
ಸರ್ವರಿಗೂ ದೀಪಾವಳಿ ಮತ್ತು ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು
✦ ಡಾ|| ಶ್ರೀನಿವಾಸ ರೆಡ್ಡಿ
✦ ಡಾ|| ರವಿಕುಮಾರ್
✦ ಡಾ|| ಧರ್ಮರೆಡ್ಡಿ
ಹಾಗೂ ಸಿಬ್ಬಂದಿ ವರ್ಗ


## ಗಣರಾಜ್ಯೋತ್ಸವ ಪೂರ್ವ ಪರೇಡ್ ಶಿಬಿರ

ದಾವಣಗೆರೆ, ನ.1- ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ ಹಾಗೂ ದಾವಣಗೆರೆ ವಿಶ್ವ ವಿದ್ಯಾ ನಿಲಯದ ಸಹಯೋಗದೊಂದಿಗೆ ಇದೇ ನವೆಂಬರ್ 5 ರಿಂದ 14 ರವರೆಗೆ ಎನ್‌ಎಸ್‌ಎಸ್ ದಕ್ಷಿಣ ವಲಯ ಗಣರಾಜ್ಯೋತ್ಸವ ಪೂರ್ವ ಪರೇಡ್ ಶಿಬಿರವನ್ನು ಆಯೋಜಿಸಲಾಗಿದೆ. ಸಂಸದರಾದ ಡಾ ಪ್ರಭಾ ಮಲ್ಲಿಕಾರ್ಜುನ್ ಶಿಬಿರ ಉದ್ಘಾಟಿಸಲಿದ್ದಾರೆ.

ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಕುಲಪತಿ ಪ್ರೊ. ಬಿ.ಡಿ ಕುಂಬಾರ ಅಧ್ಯಕ್ಷತೆ ವಹಿಸುವರು, ಪ್ರಾದೇಶಿಕ ನಿರ್ದೇಶನಾಲಯದ ನಿರ್ದೇಶಕ ಡಿ.ಕಾರ್ತಿಕೇಯನ್, ಕುಲಸಚಿವ ಪ್ರೊ.ಮಹಾಬಲೇಶ್ವರ ಯು.ಎಸ್ ಭಾಗವಹಿಸಲಿದ್ದಾರೆ.


**ದೀಪಾವಳಿ ಶುಭಾಶಯಗಳು**
ಬೆಳಕಿನ ಹಬ್ಬ ಎಲ್ಲರ ಸಂಕಷ್ಟಗಳನ್ನು ದೂರ ಮಾಡಿ, ಸುಖ-ಶಾಂತಿ ನೆಮ್ಮದಿ ನೀಡಲಿ.
ನಮ್ಮೆಲ್ಲ ಬಂಧು-ಮಿತ್ರರಿಗೆ ದೀಪಾವಳಿ ಹಬ್ಬದ ಶುಭಾಶಯಗಳು
ಪವಾಡಪ್ಪ ತಿಪ್ಪೇಸ್ವಾಮಿ
ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ,
ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765



**ದೃಷ್ಟಿ ಕಣ್ಣಿನ ಆಸ್ಪತ್ರೆ**
ಮತ್ತು
**ಆದಿತ್ಯ ಸ್ಕಿನ್ ಮತ್ತು ಕಾಸ್ಮೆಟಾಲಜಿ ಕ್ಲಿನಿಕ್**
4ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಫೋನ್ : 251584, 251585, ಮೊ : 98441-33022
ಸುಖ ಸಮೃದ್ಧಿಯ ಜ್ಯೋತಿ ನಿಮ್ಮ ಮನೆ-ಮನಗಳನ್ನು ಬೆಳಗಲಿ
ದೀಪಾವಳಿ ಮತ್ತು ಕರ್ನಾಟಕ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು
ಡಾ|| ಹೆಚ್.ಎಂ. ರವೀಂದ್ರನಾಥ್ - ನೇತ್ರ ತಜ್ಞರು.
ಡಾ|| ಸುಮನ ರವೀಂದ್ರನಾಥ್ - ಚರ್ಮ ರೋಗ ತಜ್ಞರು.
ಡಾ|| ಪಿ. ರಾಜೇಶ್ - ನೇತ್ರ ತಜ್ಞರು.
ಡಾ|| ರೂಪ - ದಂತ ತಜ್ಞರು.
ಡಾ|| ರಶ್ಮಿ ಮರಳಿಹಳ್ಳಿ - ನೇತ್ರ ತಜ್ಞರು.
ಡಾ|| ಶಿಲ್ಪ - ನೇತ್ರ ತಜ್ಞರು.

